**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.**

---

ಸಂಖ್ಯೆ:ಕಪಂರಾಆ/ಅಭಿವೃದ್ಧಿ/84/2023 ದಿನಾಂಕ: 03-03-2023

## ಸುತ್ತೋಲೆ

**ವಿಷಯ :** ಮಹಿಳಾ ಸಶಕ್ತೀಕರಣ ಹಾಗೂ ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗಾಗಿ **08 ಮಾರ್ಚ್ ರಿಂದ 30 ಜೂನ್ 2023** ರವರೆಗೆ "**ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ**" ಮತ್ತು **"ಮಹಿಳಾ ಗ್ರಾಮ ಸಭೆ"**ಗಳನ್ನು ನಡೆಸುವ ಕುರಿತು.

**ಉಲ್ಲೇಖ:** 1. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ:3ಹೆಚ್
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 364 ಗ್ರಾಪಂಅ 2014, ದಿನಾಂಕ :12-06-2014.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 225 ಗ್ರಾಪಂಅ 2020, ದಿನಾಂಕ :28-02-2020.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಆ/ಅಭಿವೃದ್ಧಿ/110/2021 ದಿನಾಂಕ: 04-03-2022.

******

ತಮಗೆ ತಿಳಿದಿರುವಂತೆ, ಜಾಗತಿಕವಾಗಿ ಹಾಗೂ ನಮ್ಮ ದೇಶದಲ್ಲಿ ಮಹಿಳೆಯರು ಶೈಕ್ಷಣಿಕ, ತಾಂತ್ರಿಕ, ವೈದ್ಯಕೀಯ, ಸಂಶೋಧನೆ, ಕೈಗಾರಿಕಾ, ರಾಜಕೀಯ ಕ್ಷೇತ್ರ, ಆಡಳಿತ ಇತ್ಯಾದಿ ಕ್ಷೇತ್ರಗಳಲ್ಲಿ ಪುರುಷರಷ್ಟೆ ಸಮಾನವಾಗಿ ಕಾರ್ಯ ನಿರ್ವಹಿಸುವುದನ್ನು ಕಾಣುತ್ತೇವೆ. ಸಾಂಸ್ಕೃತಿಕ, ಸಾಹಿತ್ಯ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿಯೂ ಉತ್ತಮ ಸಾಧನೆಗಳು ಮಾಡಿರುವುದನ್ನು ಕಾಣಬಹುದು. ಈ ಎಲ್ಲಾ ಕ್ಷೇತ್ರಗಳಲ್ಲಿನ ಮಹಿಳೆಯರ ಸಾಧನೆಗಳನ್ನು ಗಮನಿಸಿದರೆ, ಮಹಿಳೆಯರ ಭಾಗವಹಿಸುವಿಕೆ ಮತ್ತು ನಿರ್ಣಯತೆಗೆದುಕೊಳ್ಳುವ ಹಕ್ಕುಗಳು ಸಮಾಜದ ಸರ್ವೋತೋಮುಖ ಅಭಿವೃದ್ಧಿಯಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರುವುದನ್ನು ಅರ್ಥಮಾಡಿಕೊಳ್ಳಬಹುದು.

ಈ ಪರಿಕಲ್ಪನೆಯಲ್ಲಿ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಕಾರ್ಯಗಳಲ್ಲಿ, ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯು ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದು ಹಾಗೂ ಸಾರ್ವಜನಿಕ/ಸಮುದಾಯಗಳ ನಿರ್ಧಾರಗಳಲ್ಲಿ ಮಹಿಳೆಯರ ಪಾತ್ರಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು ಲಿಂಗ ಅಸಮಾನತೆಗೆ ದಾರಿಯಾಗಿದೆ, ಕೆಲಸ ಹಾಗೂ ವೇತನಗಳಲ್ಲಿ ತಾರತಮ್ಯ, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಶೋಷಣೆಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ 2015ರ ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು 2030ರನ್ನು ಭಾರತ ಸರ್ಕಾರವೂ ಒಪ್ಪಿಕೊಂಡಿದ್ದು, ಲಿಂಗಸಮಾನತೆಯ ಗುರಿಯಡಿ, ಲಿಂಗಸಮಾನತೆಯನ್ನು ಸಾಧಿಸಿ ಹೆಣ್ಣು ಮಕ್ಕಳನ್ನು ಹಾಗೂ ಮಹಿಳೆಯರನ್ನು ಸಶಕ್ತರನ್ನಾಗಿಸಬೇಕಾಗಿದೆ.

ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ನಿಜ ಅರ್ಥದಲ್ಲಿ ಸಾಕಾರಗೊಳಿಸಲು ಸ್ಥಳೀಯ ಆಡಳಿತದಲ್ಲಿ ಗ್ರಾಮ ಪಂಚಾಯತಿ ಮತ್ತು ಗ್ರಾಮ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಒತ್ತು

ನೀಡಬೇಕಾಗಿದೆ. ಗ್ರಾಮದ ಸರಿಸುಮಾರು ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಮಹಿಳೆಯರು ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಮಂಡಿಸುವುದು ಬಹಳ ಪ್ರಾಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ (2) ಮತ್ತು (3) ರ ಮೂಲಕ ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 3-ಹೆಚ್ ರನ್ವಯ ಮಹಿಳೆಯರಿಗಾಗಿ ಗ್ರಾಮ ಸಭೆಗಳನ್ನು ಆಯೋಜಿಸಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಪ್ರತೀ ವರ್ಷವೂ ಮಹಿಳೆಯರ ಗ್ರಾಮ ಸಭೆಗಳನ್ನು ನಡೆಸಲಾಗುತ್ತಿದೆ.

ಮುಂದುವರೆದು, ಪ್ರಸಕ್ತ ಕೋವಿಡ್-19ರ ಸಾಂಕ್ರಾಮಿಕ ಪಿಡುಗಿನ ಸಂದರ್ಭದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಬಾಲ್ಯವಿವಾಹ, ಬಾಲಕಾರ್ಮಿಕತೆ, ಅಪೌಷ್ಟಿಕತೆ ಹೆಚ್ಚಿರುವುದು ವರದಿಯಾಗಿದೆ. ಮಹಿಳೆಯರ ಅಗತ್ಯತೆಗಳಿಗೆ ಸ್ಪಂದಿಸಿ ಅವರ ಅಭಿವೃದ್ಧಿಗೆ ಪೂರಕವಾಗಿ, ಮಹಿಳೆಯರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗಾಗಿ ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿಗಳನ್ನಾಗಿಸಲು ಇಲಾಖೆಗಳು/ ಇಲಾಖೇತರರು/ ಸ್ಥಳೀಯ ಸಂಘ ಸಂಸ್ಥೆಗಳು ಮತ್ತು ಸಮುದಾಯದ ಸಹಭಾಗಿತ್ವದಲ್ಲಿ ದಿನಾಂಕ **08 ಮಾರ್ಚ್ ರಿಂದ 30 ಜೂನ್ 2023 ರವರೆಗೆ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"** ವನ್ನು ನಡೆಸಲು ನಿರ್ಣಯಿಸಿ, ಅಗತ್ಯ ಪೂರ್ವ ಸಿದ್ಧತೆಯೊಂದಿಗೆ ಮಹಿಳೆಯರಿಗಾಗಿ ವಿಶೇಷ ಕಾರ್ಯಕ್ರಮ/ಚಟುವಟಿಕೆಗಳನ್ನು ಆಯೋಜಿಸಿ, ಅರ್ಥಪೂರ್ಣವಾಗಿ ಮಹಿಳಾ ಗ್ರಾಮ ಸಭೆಗಳನ್ನು ನಡೆಸಿ, ಮಹಿಳೆಯರಿಂದ ಮೂಡಿಬಂದ ಬೇಡಿಕೆ/ಸಮಸ್ಯೆ/ಪ್ರಶ್ನೆಗಳಿಗೆ ಸಂಬಂಧಿಸಿದ ಇಲಾಖೆಗಳು ಸ್ಪಂದಿಸಿ, ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವ ಮೂಲಕ **"ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"** ವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು (4)ರ ಜಂಟಿ ಸುತೋಲೆಯಲ್ಲಿ ಆದೇಶಿಸಲಾಗಿರುತ್ತದೆ. ಅದರಂತೆ ಈ ವರ್ಷವು ಸದರಿ ಅಭಿಯಾನವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿದೆ.

ಆದುದ್ದರಿಂದ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಭಾಗೀದಾರರ ವಿಶೇಷವಾಗಿ ಸ್ಥಳೀಯ ಮಹಿಳಾ ಸ್ವಸಹಾಯ /ಸ್ತ್ರೀಶಕ್ತಿ ಸಂಘಗಳ ಸಹಭಾಗಿತ್ವದಲ್ಲಿ ಈ ಜಂಟಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ಅಗತ್ಯ ಪೂರ್ವ ಸಿದ್ಧತೆಯೊಂದಿಗೆ ಮಹಿಳೆಯರಿಗಾಗಿ ವಿಶೇಷ ಕಾರ್ಯಕ್ರಮ/ಚಟುವಟಿಕೆಗಳನ್ನು ಆಯೋಜಿಸಿ, ಅರ್ಥಪೂರ್ಣವಾಗಿ ಮಹಿಳಾ ಗ್ರಾಮ ಸಭೆಗಳನ್ನು ನಡೆಸಿ, ಮಹಿಳೆಯರಿಂದ ಮೂಡಿಬಂದ ಬೇಡಿಕೆ/ಸಮಸ್ಯೆ/ಪ್ರಶ್ನೆಗಳಿಗೆ ಸಂಬಂಧಿಸಿದ ಇಲಾಖೆಗಳು ಸ್ಪಂದಿಸಿ, ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವ ಮೂಲಕ **08 ಮಾರ್ಚ್ ರಿಂದ 30 ಜೂನ್ 2023 ರವರೆಗೆ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"** ವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆದೇಶಿಸಿದೆ.

1. **"ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ದ ಪೂರ್ವ ತಯಾರಿ:**
   - ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಉಪ ಸಮಿತಿಗಳಾದ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಬಾಲ ವಿಕಾಸ ಸಮಿತಿ, ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಬಾಲ್ಯ ವಿವಾಹ ತಡೆ ಸಮಿತಿ, ಗ್ರಾಮ ಪಂಚಾಯತಿ ಗ್ರಂಥಾಲಯ,, ಗ್ರಾಮ ಆರೋಗ್ಯ,ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿ, ಗ್ರಾಮೀಣ ನೀರು ಸರಭರಾಜು ಮತ್ತು ಸ್ವಚ್ಛತಾ ಸಮಿತಿ ಸೇರಿದಂತೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 (ತಿದ್ದುಪಡಿ 2015)ರ ಪ್ರಕರಣ 61-ಎ ರಡಿಯಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚಿಸಲಾದ ವಿವಿಧ **ಉಪಸಮಿತಿಯ ಪ್ರತಿನಿಧಿಗಳ ಮತ್ತು ವಿವಿಧ ಲಾಖೆ/ಇಲಾಖೇತರ ಭಾಗೀದಾರರ ಸಭೆಯನ್ನು 2023 ಮಾರ್ಚ್ 05 ರೊಳಗೆ ನಡೆಸುವುದು.**

- ಈ ಸಭೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಒತ್ತು ನೀಡಿ **08 ಮಾರ್ಚ್ ರಿಂದ 30 ಜೂನ್ 2023**ರ ವರೆಗೆ ಗ್ರಾಮ ಪಂಚಾಯಿತಿಯಿಂದ "**ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ**" ಕುರಿತು ಚರ್ಚಿಸಿ 16 ವಾರಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಸಿದ್ಧಪಡಿಸಿಕೊಳ್ಳುವುದು.(**ಅನುಬಂಧ-ಎರಲ್ಲಿ ಮಾದರಿ ತಾತ್ಕಾಲಿಕ ಕಾರ್ಯಕ್ರಮ/ ಚಟುವಟಿಕೆಗಳ ವಿವರವನ್ನು ನೀಡಿದೆ.)**
- 2020-21 ಮತ್ತು 2021-2022 ರಲ್ಲಿ ನಡೆಸಲಾದ ಮಹಿಳಾ ಗ್ರಾಮ ಸಭೆಯ ನಡಾವಳಿಗಳನ್ನು ಪರಾಮರ್ಶಿಸಿ, ಅನುಪಾಲನಾ ವರದಿಯನ್ನು ಗ್ರಾಮವಾರು ಸಿದ್ಧಪಡಿಸಿ, ಸ್ಥಳೀಯ ಸ್ವಸಹಾಯ ಸಂಘಗಳು ಮತ್ತು ಮಕ್ಕಳ ಹಕ್ಕುಗಳ ಹಾಗೂ ಮಹಿಳೆಯರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳೊಂದಿಗೆ ಮುಂಚಿತವಾಗಿ ಹಂಚಿಕೊಂಡು ಅವರುಗಳ ಪ್ರತಿಕ್ರಿಯೆ ಮತ್ತು ಶಿಫಾರಸ್ಸುಗಳನ್ನು ಪಡೆದು ಅಂತಿಮಗೊಳಿಸುವುದು. ಸದರಿ ವರದಿಯನ್ನು 2023ರ ಮಹಿಳಾ ಗ್ರಾಮ ಸಭೆಯಲ್ಲಿ ಪ್ರಸ್ತುತ ಪಡಿಸುವುದು.
- ಪ್ರತಿ ಗ್ರಾಮದ ಮಹಿಳೆಯರ ಜನವರಿ-2022 ರಿಂದ ಡಿಸೆಂಬರ್- 2022ರ ಅಂತ್ಯದವರೆಗೆ ಇರುವಂತೆ ಅಂಕಿ-ಸಂಖ್ಯೆಯ ವಿವರಗಳನ್ನು ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆಯರ ಸಮನ್ವಯತೆಯಲ್ಲಿ ಸಿದ್ಧಪಡಿಸಬೇಕು. ಈ ವಿವರಗಳನ್ನು ಮಹಿಳಾ ಗ್ರಾಮ ಸಭೆಯಲ್ಲಿ ಮಂಡಿಸಬೇಕು. (**ಅನುಬಂಧ-ಬಿ, ಮಹಿಳೆಯರ ಸ್ಥಿತಿ ಕುರಿತು ಅಂಕಿ ಸಂಖ್ಯೆಯ ಮಾಹಿತಿ ಸಂಗ್ರಹಿಸಲು ಮಾದರಿ ನಮೂನೆ).**
- ಕರಪತ್ರದ ಮೂಲಕ ಮತ್ತು ಸ್ಥಳೀಯ ವಿವಿಧ ಪ್ರಕಾರಗಳನ್ನು ಬಳಸಿ "ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ಮತ್ತು ಮಹಿಳಾ ಗ್ರಾಮ ಸಭೆ ನಡೆಸುವ ಕುರಿತು ವ್ಯಾಪಕ ಪ್ರಚಾರ ಮಾಡುವುದು.
- ಗ್ರಾಮಗಳಲ್ಲಿನ ಎಲ್ಲಾ ಮಹಿಳಾ ಸ್ವಸಹಾಯ/ಸ್ತ್ರೀಶಕ್ತಿ ಸಂಘಗಳ ಮಹಿಳೆಯರಿಗೆ ತಿಳಿಯಪಡಿಸಿ, ಸ್ವ-ಸಹಾಯ ಸಂಘದ ಎಲ್ಲಾ ಸದಸ್ಯರು ಮಹಿಳಾ ಗ್ರಾಮ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಖಾತರಿ ಪಡಿಸಿಕೊಳ್ಳುವುದು.
- ಈಗಾಗಲೇ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ ಭಾಗವಾಗಿ ಗ್ರಾಮ ಪಂಚಾಯಿತಿಗಳಿಂದ ರಚಿಸಲಾಗಿರುವ **ಫೇಸ್‌ಬುಕ್ ಪೇಜ್‌ನಲ್ಲಿ** ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ ಉದ್ದೇಶಗಳು ಮತ್ತು ಮಹಿಳಾ ಗ್ರಾಮ ಸಭೆ ನಡೆಸುವ ಕುರಿತು ವ್ಯಾಪಕ ಪ್ರಚಾರ ಮಾಡುವುದು.

2. **ಇಲಾಖೆ ಮತ್ತು ಇಲಾಖೇತರರ ಸಮನ್ವಯತೆ:** ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಲು ಸಂಬಂಧಿಸಿದವರ ಸಮನ್ವಯತೆ ಬಹಳ ಮುಖ್ಯವಾಗಿದೆ,

- ಮಹಿಳೆಯರಿಗಾಗಿ ತಮ್ಮ ಇಲಾಖೆಯಲ್ಲಿರುವ ಯೋಜನೆಗಳು, ಕಾರ್ಯಕ್ರಮಗಳನ್ನು ಆಯಾ ಇಲಾಖೆಗಳು ಪ್ರತ್ಯೇಕವಾಗಿ ಆಯೋಜಿಸದೆ, ಪೂರ್ವ ಭಾವಿ ಸಿದ್ಧತೆ ಸಭೆಯಲ್ಲಿ ಚರ್ಚಿಸಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದು.
- ಇಲಾಖೇತರರು, ಸ್ವಯಂ ಸೇವಾ ಸಂಸ್ಥೆಗಳು, ಮಹಿಳಾ ಸಂಘಗಳು ಮಹಿಳೆಯರಿಗಾಗಿ ಪ್ರತ್ಯೇಕ ಕಾರ್ಯಕ್ರಮಗಳನ್ನು ಆಯೋಜಿಸದೆ, ತಮ್ಮ ಕಾರ್ಯಕ್ರಮಗಳನ್ನು ಅಥವಾ ತಾವು ದೇಣಿಗೆದಾರರಿಂದ ಈ ಉದ್ದೇಶಕ್ಕಾಗಿ ಸ್ವೀಕರಿಸಿದ ಅನುದಾನವನ್ನು ಹಾಗೂ ತಾಂತ್ರಿಕ ಬೆಂಬಲದೊಂದಿಗೆ ಈ ಅಭಿಯಾನದಲ್ಲಿ ಸಮನ್ವಯಗೊಳಿಸುವುದು.

3. **ಕಾರ್ಯಚಟುವಟಿಕೆ/ಕಾರ್ಯಕ್ರಮಗಳು:** ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನದ 16 ವಾರಗಳ ಅವಧಿಯಲ್ಲಿ ಪ್ರತೀ ವಾರದಲ್ಲಿ ಒಂದು ಕಾರ್ಯಕ್ರಮ/ಚಟುವಟಿಕೆಯನ್ನು ಕಡ್ಡಾಯವಾಗಿ ನಡೆಸುವುದು. ಸಾಂಸ್ಕೃತಿಕ, ಮನರಂಜನೆ, ಕ್ರೀಡೆ, ಆರೋಗ್ಯ/ ಪೌಷ್ಟಿಕಾಂಶ/ನೈರ್ಮಲ್ಯ, ಮಹಿಳಾ

ಕಾನೂನುಗಳು ಮುಂತಾದವುಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳು ಸ್ಥಳೀಯವಾಗಿ ಮಹಿಳೆಯರ ಅಗತ್ಯತೆ ಅನುಸರಿಸಿ ಅಥವಾ ಅವರ ಸಶಕ್ತೀಕರಣಕ್ಕೆ ಉಪಯುಕ್ತವಾಗುವ ಕಾರ್ಯಕ್ರಮ/ಚಟುವಟಿಕೆಗಳನ್ನು ಆಯೋಜಿಸುವುದು. **(ಅನುಬಂಧ-ಎರಲ್ಲಿ ತಿಳಿಸಿರುವಂತೆ ಕಾರ್ಯಕ್ರಮ/ಚಟುವಟಿಕೆಗಳನ್ನು ಆಯೋಜಿಸುವುದು.)**

**"ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ-08 ಮಾರ್ಚ್ 2023" ಪ್ರತಿ ಗ್ರಾಮ ಪಂಚಾಯತಿಯಲ್ಲಿ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಯನ್ನು ಆಯೋಜಿಸುವುದು ಹಾಗೂ ಈ ಮೂಲಕ "ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಕ್ಕೆ ಚಾಲನೆ ನೀಡುವುದು.**

**4. ಮಹಿಳಾ ಗ್ರಾಮ ಸಭೆಗಳ ಆಯೋಜನೆ:**

- ಆಯಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಯವರು ನಿಗದಿಗೊಳಿಸಿದ ದಿನ ಮಹಿಳಾ ಗ್ರಾಮ ಸಭೆಯನ್ನು ನಡೆಸುವುದು.
- ಮಹಿಳಾ ಗ್ರಾಮ ಸಭೆಯ ಮುಂಚಿತವಾಗಿ ಮಹಿಳಾ ವಾರ್ಡ್ ಸಭೆಗಳನ್ನು ಪೂರ್ಣಗೊಳಿಸುವುದು.

**4.1. ಸಲಹಾ ಪೆಟ್ಟಿಗೆ:** ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಬರೆದು ಹಾಕಲು

- **"ಸಲಹಾ ಪೆಟ್ಟಿಗೆ"** ಯನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಜನವಸತಿ ಪ್ರದೇಶದಲ್ಲಿರುವ ಅಂಗನವಾಡಿ ಕೇಂದ್ರ, ಪಡಿತರ ವಿತರಣ ಕೇಂದ್ರ, ಸಹಕಾರ ಸಂಘಗಳಲ್ಲಿ, ಶಾಲೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಗ್ರಾಮ ಪಂಚಾಯತಿ ಕಚೇರಿ ಆವರಣ ಸೇರಿದಂತೆ ಇತರೆ ಸುರಕ್ಷಿತ ಸಾರ್ವಜನಿಕ ಸ್ಥಳಗಳಲ್ಲಿ ವ್ಯವಸ್ಥೆ ಮಾಡುವುದು.
- ಮಹಿಳೆಯರು ಮತ್ತು ಮಹಿಳೆಯರ ಪರವಾಗಿ ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಬರೆದು ಹಾಕಲು ಅನುಕೂಲವಾಗುವಂತೆ ಸಲಹಾ ಪೆಟ್ಟಿಗೆಯನ್ನು ಆಕರ್ಷಣೀಯವಾಗಿ ತಯಾರಿಸುವುದು ಹಾಗೂ ಪೆಟ್ಟಿಗಿಯ ಮೇಲೆ ಉದ್ದೇಶ ಮತ್ತು ಕೋರಿಕೆ ಪತ್ರ ವಿವರ ಇರುವ ಪೋಸ್ಟರ್‌ನ್ನು ಬರೆದು ಅಂಟಿಸುವುದು.**(ಅನುಬಂಧ-ಸಿ)**
- **"ಸಲಹಾ ಪೆಟ್ಟಿಗೆ**"ಯ ಮೇಲೆ ಮಹಿಳೆಯರಿಗೆ ಸಂಬಂಧಿಸಿದ ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಬರೆದು ಹಾಕಲು ಕೊನೆಯ ದಿನಾಂಕವನ್ನು ಪ್ರಕಟಿಸಬೇಕು ಹಾಗೂ ಈ ಕುರಿತು ವ್ಯಾಪಕ ಪ್ರಚಾರ ಮಾಡುವುದು.
- ಗ್ರಾಮ ಪಂಚಾಯಿತಿಯಿಂದ ಅಗತ್ಯವಿರುವಷ್ಟು ಕೋರಿಕೆ ಪತ್ರಗಳನ್ನು ಮುದ್ರಿಸಿ ಸಲಹಾ ಪೆಟ್ಟಿಗೆ ಇಡುವ ಸ್ಥಳದಲ್ಲಿ ಲಭ್ಯವಿರುವಂತೆ ಮಾಡುವುದು ಹಾಗೂ ಸ್ಥಳೀಯ ಅಂಗನವಾಡಿ, ಆಶಾ ಮತ್ತು ಆರೋಗ್ಯ ಕಾರ್ಯಕರ್ತೆಯರ ಹತ್ತಿರ ಲಭ್ಯವಿರುವಂತೆ ನೋಡಿಕೊಳ್ಳುವುದು.
- ಕೋರಿಕೆ ಪತ್ರಗಳನ್ನು ಸಾಮಾಜಿಕ ಜಾಲತಾಣ, ವಾಟ್ಸಾಪ್ ಇತ್ಯಾದಿಗಳ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯಕ್ಕೆ ತಲುಪುವಂತೆ ಹಾಗೂ ಮುದ್ರಿಸಲಾದ ಕೋರಿಕೆ ಪತ್ರಗಳು ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಲಭ್ಯವಿರುವಂತೆ ಮಾಡುವುದು.
- ಮಹಿಳೆಯರಿಂದ **"ಸಲಹಾ ಪೆಟ್ಟಿಗೆ**"ಯಲ್ಲಿ ಬರೆದು ಹಾಕಲಾದ ಸಮಸ್ಯೆಗಳು/ ಬೇಡಿಕೆಗಳು/ ಪ್ರಶ್ನೆಗಳನ್ನು ಪಟ್ಟಿ ಮಾಡಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿದ **ನಮೂನೆ-2ರಲ್ಲಿ** ತಯಾರಿಸುವುದು ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಗ್ರಾಮ ಸಭೆಯಲ್ಲಿ ಮಂಡಿಸುವುದು.

### 4.2. ಮಹಿಳಾ ವಾರ್ಡ್ ಸಭೆ:

- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಜನವಸತಿ ಪ್ರದೇಶಗಳನ್ನು ಒಳಗೊಂಡಂತೆ ಮಹಿಳೆಯರ ವಾರ್ಡ್ ಸಭೆಗಳನ್ನು ನಡೆಸುವುದು. ಕೋವಿಡ್-19 ಹರಡದಂತೆ ಎಲ್ಲಾ ಮುಂಜಾಗ್ರತ ಕ್ರಮಗಳನ್ನು (ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಪಾಲಿಸುವುದು, ಸ್ಯಾನಿಟೈಜರ್ ಬಳಸುವುದು) ಅನುಸರಿಸುವುದು.
- **ಮಹಿಳೆಯರ ವಾರ್ಡ್ ಸಭೆಗಳ ನಿರ್ವಹಣೆಯ ಜವಬ್ದಾರಿಯನ್ನು ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರಿಗೆ ವಹಿಸುವುದು. ಅಂಗನವಾಡಿ ಕಾರ್ಯಕರ್ತೆಯರು ಮಹಿಳಾ ವಾರ್ಡ್ ಸಭೆ ಕುರಿತು ವ್ಯಾಪಕ ಪ್ರಚಾರದ ಮೂಲಕ ಮಹಿಳೆಯರಿಗೆ ತಿಳಿಯಪಡಿಸುವುದು ಹಾಗೂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಈ ಸಂಬಂಧ ಅಗತ್ಯ ಕ್ರಮ ವಹಿಸುವುದು.**
- ಆಯಾ ವಾರ್ಡ್ ಸಂಬಂಧಪಡುವ ಗ್ರಾಮ ಪಂಚಾಯಿತಿ ಚುನಾಯಿತ ಸದಸ್ಯರು ಮೇಲುಸ್ತುವಾರಿ ವಹಿಸುವುದು ಮತ್ತು ಮಹಿಳಾ ವಾರ್ಡ್ ಸಬೆಯಲ್ಲಿ ಕಡ್ಡಾಯವಾಗಿ ಭಾಗವಹಿಸುವುದು.
- ಮಹಿಳಾ ವಾರ್ಡ್ ಸಭೆಯನ್ನು ಸ್ವಸಹಾಯ/ಸ್ತ್ರೀಶಕ್ತಿ ಸಂಘಗಳ, ವಿವಿಧ ಸಮುದಾಯದ ಮತ್ತು ದುಡಿಯುವ ಮಹಿಳೆಯರ ಅನುಕೂಲವಾಗುವ ದಿನ ಮತ್ತು ಸಮಯಕ್ಕೆ ನಡೆಸುವುದು.
- ಸಭೆಗಳಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ವಿಶೇಷವಾಗಿ ವಿಕಲಚೇತನ ಮಹಿಳೆಯರಿಗೆ ಭಾಗವಹಿಸಲು ಮತ್ತು ಚರ್ಚಿಸಲು ಸಮಾನ ಅವಕಾಶ ನೀಡುವುದು.
- ಅಂಗನವಾಡಿ, ಆಶಾಕಾರ್ಯಕರ್ತೆಯರು ತಮ್ಮ ಬೇಡಿಕೆಗಳು/ಸಮಸ್ಯೆಗಳು/ಪ್ರಶ್ನೆಗಳನ್ನು ಸಹ ವ್ಯಕ್ತಪಡಿಸಲು, ಚರ್ಚಿಸಲು ಸಮಾನ ಅವಕಾಶ ಕಲ್ಪಿಸುವುದು.
- **ಮಹಿಳಾ ವಾರ್ಡ್ ಸಭೆಯಲ್ಲಿ**
  - ಮಹಿಳೆಯರ ಹಕ್ಕುಗಳು, ಮಹಿಳೆಯರಿಗಾಗಿ ಸರ್ಕಾರದಿಂದ ಇರುವ ವಿವಿಧ ಯೋಜನೆಗಳು, ಸೌಲಭ್ಯಗಳ ಕುರಿತು ಸಂಕ್ಷಿಪ್ತವಾಗಿ ತಿಳಿಸುವುದು.
  - ವಾರ್ಡ್ ಸಭೆಯಲ್ಲಿ ಮಹಿಳೆಯರಿಗೆ, ತಮ್ಮ ವೈಯಕ್ತಿಕ ಸಮಸ್ಯೆಗಳು, ಕೌಟುಂಬಿಕ ಸಮಸ್ಯೆಗಳು, ಮಕ್ಕಳ ಶಿಕ್ಷಣ/ಶಾಲೆ, ಆರೋಗ್ಯ ಸೇವೆ, ರಕ್ಷಣೆ ವ್ಯವಸ್ಥೆ, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ/ ರಸ್ತೆ/ಸಾರ್ವಜನಿಕ ಕಟ್ಟಡ, ಶಾಲೆ/ಅಂಗನವಾಡಿ, ವಸತಿ ಸೌಲಭ್ಯ, ಮಾನವ ಸಂಪನ್ಮೂಲ ಮುಂತಾದ ಕ್ಷೇತ್ರ/ವಿಷಯಗಳಿಗೆ ಸಂಬಂಧಿಸಿದ ತಮ್ಮ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಕುರಿತು ಮಾತನಾಡಲು ಮುಕ್ತ ಅವಕಾಶ ನೀಡುವುದು.
  - ಪ್ರಮುಖವಾಗಿ ಕೋವಿಡ್-19ರ ಲಾಕ್‌ಡೌನ್ ಸಮಯದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಅಪೌಷ್ಟಿಕತೆ ಹಾಗೂ ಬಾಲ್ಯವಿವಾಹಗಳ ಕುರಿತು ಚರ್ಚಿಸಲು ತಿಳಿಸುವುದು.
  - ಮಹಿಳೆಯರು ಪಡೆಯುತ್ತಿರುವ ಸೌಲಭ್ಯಗಳು ಹಾಗೂ ವ್ಯವಸ್ಥೆಗಳ ಕುರಿತು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ತಿಳಿಸುವುದು.
  - ಮಹಿಳಾ ವಾರ್ಡ್ ಸಭೆಯ ಚರ್ಚೆಯಲ್ಲಿ ಮಹಿಳೆಯರಿಂದ ಮೂಡಿಬಂದ ಸಮಸ್ಯೆಗಳು/ಬೇಡಿಕೆಗಳ/ಪ್ರಶ್ನೆಗಳು ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ **ನಮೂನೆ-2**ರಲ್ಲಿ ತಯಾರಿಸುವುದು.
- ಗ್ರಾಮ ಪಂಚಾಯತಿ ಮಟ್ಟದ ಮಹಿಳಾ ಗ್ರಾಮ ಸಬೆಯಲ್ಲಿ ಆಯಾ ವಾರ್ಡ್‌ನ್ನು ಪ್ರತಿನಿಧಿಸಿ ಭಾಗವಹಿಸಲು, ಸ್ವಸಹಾಯ/ಸ್ತ್ರೀಶಕ್ತಿ ಸಂಘಗಳ ಹಾಗೂ ಎಲ್ಲಾ ಸಮುದಾಯ/ವಿಭಾಗದ ಮಹಿಳೆಯರನ್ನು ಪ್ರತಿನಿಧಿಸುವಂತೆ ಹಾಗೆ ವಾರ್ಡ್ ಸಭೆಯಲ್ಲಿಯೇ ಗುರುತಿಸುವುದು. ಮಹಿಳಾ

ವಾರ್ಡ್ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಮಹಿಳೆಯರ ಮತ್ತು ಇತರರ ಸಹಿಗಳನ್ನು ಸಂಬಂಧಿಸಿದ ನಡಾವಳಿ/ಹಾಜರಾತಿ ವಹಿಯಲ್ಲಿ ಪಡೆಯುವುದು.

**4.3. ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳಾ ಗ್ರಾಮ ಸಭೆ:**

- ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ನಿಗದಿಪಡಿಸಲಾದ ದಿನಾಂಕ ಮತ್ತು ಗ್ರಾಮ ಪಂಚಾಯಿತಿ ನಿಗದಿಪಡಿಸಿದ ಸ್ಥಳದಲ್ಲಿ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಗ್ರಾಮ ಸಭೆಯನ್ನು ನಡೆಸುವುದು.
- ಗ್ರಾಮ ಸಭೆ ನಡೆಸುವ ಸಮಯದಲ್ಲಿ **ಸಾಮಾನ್ಯ ಆರೋಗ್ಯ ತಪಾಸಣೆ** ವಿಶೇಷವಾಗಿ **ರಕ್ತಹೀನತೆ (Anemia)** ತಪಸಣಾ ಆರೋಗ್ಯ ಶಿಬಿರಾ ಕಾರ್ಯಕ್ರಮವನ್ನು ಪ್ರಾಥಮಿಕ ಆರೋಗ್ಯ ಕೇಂದ್ರುದ ವೈದ್ಯಾಧಿಕಾರಿಗಳ ಸಹಕಾರದೊಂದಿಗೆ ಕಡ್ಡಾಯವಾಗಿ ಆಯೋಜಿಸುವುದು.
- ಮಹಿಳೆಯರ ಗ್ರಾಮ ಸಭೆಗಳಲ್ಲಿ ಆಯಾ ವಾರ್ಡ್ ಸಭೆಯಲ್ಲಿ ಗುರುತಿಸಲಾದ ಮಹಿಳೆಯರು ಭಾಗವಹಿಸಲು ವಾರ್ಡ್ ಸಭೆಯನ್ನು ನಿರ್ವಹಿಸಿದ ಅಂಗನವಾಡಿ ಕಾರ್ಯಕರ್ತೆಯರು ಸೂಕ್ತ ಕ್ರಮವಹಿಸುವುದು.
- ವಿವಿಧ ಇಲಾಖೆಗಳ ಸ್ಥಳೀಯ ಅಧಿಕಾರಿಗಳು ಹಾಜರಾಗುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಗೈರು ಹಾಜರಾದ ಇಲಾಖಾ ಅಧಿಕಾರಿಗಳ ವಿವರಗಳನ್ನು ದಾಖಲಿಸಿ ಮೇಲಾಧಿಕಾರಿಗಳ ಗಮನಕ್ಕೆ ತರುವುದು.
- ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರು ಭಾಗವಹಿಸುವಂತೆ ನೋಡಿಕೊಳ್ಳುವುದು.
- ಮಹಿಳೆಯರ ಹಕ್ಕುಗಳನ್ನು ಸಂಕ್ಷಿಪ್ತವಾಗಿ ತಿಳಿಸುವುದು.
- ಮಹಿಳೆಯರಿಗಾಗಿ ಸರ್ಕಾರದಿಂದ ಇರುವ ವಿವಿಧ ಯೋಜನೆಗಳು, ಸೌಲಭ್ಯಗಳ ಕುರಿತು **RDPR WebSite ನಲ್ಲಿ ಪ್ರಕಟಿಸಲಾದ PPTನ್ನು** ಮತ್ತು ವಿವಿಧ ಇಲಾಖೆಯ ಯೋಜನೆಗಳ ಪೋಸ್ಟರ್ ಗಳನ್ನು ಪ್ರಸ್ತುತಪಡಿಸುವುದು ಹಾಗೂ ಸಂಕ್ಷಿಪ್ತವಾಗಿ ತಿಳಿಸುವುದು.
- ಹಿಂದಿನ ವರ್ಷದ ಮಹಿಳಾ ಗ್ರಾಮ ಸಭೆಯ ನಿರ್ಣಯಗಳನ್ನು ಹಾಗೂ ಅನುಪಾಲನಾ ವರದಿಯನ್ನು ಮಂಡಿಸುವುದು ಹಾಗೂ ಚರ್ಚಿಸಿ ನಡವಳಿಗಳನ್ನು ದಾಖಲಿಸುವುದು.
- ಮಹಿಳಾ ವಾರ್ಡ್ ಸಭೆಗಳಲ್ಲಿ ಮತ್ತು ಸಲಹಾ ಪೆಟ್ಟಿಗೆಯ ಮೂಲಕ ಮೂಡಿಬಂದ ಸಮಸ್ಯೆಗಳು/ಬೇಡಿಕೆಗಳ/ಪ್ರಶ್ನೆಗಳು ಪಟ್ಟಿಯನ್ನು ಗ್ರಾಮ/ವಾರ್ಡ್ ವಾರು ಕ್ರೋಢೀಕರಿಸಿ ಸಭೆಯಲ್ಲಿ ಮಂಡಿಸುವುದು.
- ಮಹಿಳಾ ವಾರ್ಡ್ ಸಭೆಯಲ್ಲಿ ಮತ್ತು ಸಲಹಾ ಪೆಟ್ಟಿಗೆ ಮೂಲಕ ಮೂಡಿಬಂದ ಮಹಿಳೆಯರ ಬೇಡಿಕೆ/ಸಮಸ್ಯೆ/ಪ್ರಶ್ನೆಗಳ ಪಟ್ಟಿಯನ್ನು ಚರ್ಚಿಸಿ ಸರ್ವಾನುಮತದಿಂದ ಆದ್ಯತೀಕರಿಸಿ ಅಂತಿಮ ಬೇಡಿಕೆ/ಸಮಸ್ಯೆ/ಪ್ರಶ್ನೆಗಳ ಪಟ್ಟಿಯನ್ನು ತಯಾರಿಸುವುದು.(**ನಮೂನೆ-2ರಲ್ಲಿ ದಾಖಲಿಸುವುದು**)
- ಮಹಿಳಾ ಗ್ರಾಮ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಮಹಿಳೆಯರ ಮತ್ತು ಇತರರ ಸಹಿಗಳನ್ನು ಸಂಬಂಧಿಸಿದ ನಡವಳಿ/ಹಾಜರಾತಿ ವಹಿಯಲ್ಲಿ ಪಡೆಯುವುದು.
- **ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವ-ಸಹಾಯ ಸಂಘಗಳು/ಸ್ತ್ರೀ ಶಕ್ತಿ ಸಂಘಗಳು/ ಮಹಿಳೆಯರು ಸ್ಥಳೀಯವಾಗಿ ತಯಾರಿಸಲಾದ ಬಟ್ಟೆ ಬ್ಯಾಗ್/ಉಡುಪುಗಳು/ ಆಟಿಕೆಗಳು/ ಆಕರ್ಷಣೀಯ ವಸ್ತುಗಳನ್ನು ಪ್ರದರ್ಶಿಸಲು ಗ್ರಾಮ ಸಭೆಯಲ್ಲಿ ಅವಕಾಶ ಕಲ್ಪಿಸುವುದು.**
- ಅಂಗನವಾಡಿ, ಆಶಾಕಾರ್ಯಕರ್ತೆಯರು ತಮ್ಮ ಬೇಡಿಕೆಗಳು/ಸಮಸ್ಯೆಗಳು/ಪ್ರಶ್ನೆಗಳನ್ನು ಸಹ ವ್ಯಕ್ತಪಡಿಸಲು ಚರ್ಚಿಸಲು ಸಮಾನ ಅವಕಾಶ ಕಲ್ಪಿಸುವುದು.

### 4.4 ಗ್ರಾಮ ಪಂಚಾಯಿತಿ ಡೆಸ್ಕ್ (GP Desk)

- ಮಹಿಳಾ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ನಡೆಯುವ ಸಂದರ್ಭದಲ್ಲಿ ಮಹಿಳೆಯರಿಗೆ ವಿವಿಧ ಯೋಜನೆಗಳ ಮಾಹಿತಿ ಪಡೆಯಲು ಅನುಕೂಲವಾಗುವಂತೆ ಗ್ರಾಮ ಪಂಚಾಯಿತಿ ಡೆಸ್ಕ್ ವ್ಯವಸ್ಥೆ ಮಾಡುವುದು. ಈ ಡೆಸ್ಕನ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಯ ಸಿಬ್ಬಂದಿಗೆ ವಹಿಸುವುದು. ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಇಲಾಖೆಗಳಿಂದ ಜಾರಿಯಲ್ಲಿರುವ ಯೋಜನೆಗಳ ಕಿರು-ಪುಸ್ತಕ/ಪೋಸ್ಟರ್‌ಗಳನ್ನು ಮಹಿಳೆಯರಿಗೆ ಲಭ್ಯವಿರುವಂತೆ ನೋಡಿಕೊಳ್ಳುವುದು.
- ಈ ಗ್ರಾಮ ಪಂಚಾಯಿತಿ ಡೆಸ್ಕನ ಮೂಲಕ NRLM ಅಡಿಯಲ್ಲಿ ದಾಖಲಾಗದೇ ಇರುವ ಮಹಿಳೆಯರನ್ನು ಗುರುತಿಸಿ ಸ್ವ-ಸಹಾಯ ಸಂಘಗಳ ಗುಂಪಿನಲ್ಲಿ ದಾಖಲಿಸಲು ಪಟ್ಟಿ ಮಾಡುವುದು.
- ಈ ಗ್ರಾಮ ಪಂಚಾಯಿತಿ ಡೆಸ್ಕನ ಮೂಲಕ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ದಾಖಲಾಗದೇ ಇರುವ ಮಹಿಳೆಯರನ್ನು ಗುರುತಿಸಿ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಜಾಬ್ ಕಾರ್ಡ್‌ನಲ್ಲಿ ದಾಖಲಿಸಲು ಪಟ್ಟಿ ಮಾಡುವುದು.
- ಈ ಗ್ರಾಮ ಪಂಚಾಯಿತಿ ಡೆಸ್ಕನ ಮೂಲಕ ಮಹಿಳೆಯರಿಗೆ ಸರ್ಕಾರದ ವಿವಿಧ ಇಲಾಖೆಯ ಯೋಜನೆಗಳ ಸೌಲಭ್ಯಗಳನ್ನು ತಿಳಿಸುವುದು ಹಾಗೂ ಸಂಬಂಧಿಸಿದ ಯೋಜನೆಗಳಿಗೆ ಅರ್ಹ ಇರುವ ಮಹಿಳೆಯರ ಫಲಾನುಭವಿಗಳ ಪಟ್ಟಿಯನ್ನು ತಯಾರಿಸುವುದು.
- ಸಾಂಪ್ರದಾಯಿಕ/ಆಧುನಿಕ ಜೀವನ ಕೌಶಲ್ಯ ತರಬೇತಿ ಪಡೆಯಲು ಇಚ್ಛಿಸುವ ಮಹಿಳೆಯರು ಮತ್ತು ಕಿಶೋರಿಯರ ಪಟ್ಟಿಯನ್ನು ತಯಾರಿಸುವುದು ಹಾಗೂ ಬೇಡಿಕೆ ಆಧಾರಿಸಿ NRLMನ RESETI/RuDSETI ರಡಿಯಲ್ಲಿ ತರಬೇತಿಗಳನ್ನು ನಡೆಸಲಾಗುವುದು ಎಂದು ತಿಳಿಸುವುದು.
- ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳಾದ ಗ್ರಾಮ ಪಂಚಾಯಿತಿಯ ಮಹಿಳೆಯರ ಪ್ರಸ್ತುತ ದಾಖಲಾದ ವಿವರಗಳು ಮತ್ತು ಗ್ರಾಮ ಪಂಚಾಯಿತಿಯ ಡೆಸ್ಕ್ ಮುಖಾಂತರ ನೋಂದಣಿಗೆ ಗುರುತಿಸಿದ ಮಹಿಳೆಯರ ಸಂಖ್ಯೆಗಳನ್ನು **ನಮೂನೆ-4ರಲ್ಲಿ** ದಾಖಲಿಸುವುದು ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿದ ನಮೂನೆಯಲ್ಲಿ ದಾಖಲಿಸುವುದು.

### 5. ಚಟುವಟಿಕೆಗಳ ಯೋಜನೆ ತಯಾರಿ ಮತ್ತು ಅನುಷ್ಠಾನ:

- ಈ ಅಭಿಯಾನದ ಪೂರ್ವ ಸಿದ್ಧತಾ ಸಭೆಯಲ್ಲಿ ಯೋಜಿಸಲಾದ ಕಾರ್ಯಚಟುವಟಿಕೆಗಳ ತಾತ್ಕಾಲಿಕ ವೇಳಾಪಟ್ಟಿಯನ್ನು **ನಮೂನೆ-1ರಲ್ಲಿ** ದಾಖಲಿಸುವುದು.
- ಮಹಿಳಾ ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಲಾದ ಮಹಿಳೆಯರ ಬೇಡಿಕೆ/ಸಮಸ್ಯೆ/ಪ್ರಶ್ನೆಗಳ ಅನುಷ್ಠಾನಕ್ಕೆ ಯೋಜನೆಯನ್ನು ಗ್ರಾಮ ಪಂಚಾಯಿತಿಯಿಂದ ತಯಾರಿಸಿ ಅಗತ್ಯ ಕ್ರಮ ಕೈಗೊಳ್ಳುವುದು. (**ನಮೂನೆ-3ರಲ್ಲಿ ದಾಖಲಿಸುವುದು**)
- ಮಹಿಳೆಯರ ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಆದ್ಯತೆ ಮತ್ತು ನಿರ್ಣಯಗಳ ಅನುಸಾರ ಪರಿಹಿರಿಸಲು ಕ್ರಮವಹಿಸುವುದು.

### 6.ಅನುಷ್ಠಾನ ಮತ್ತು ಉಸ್ತುವಾರಿ ಪ್ರಕ್ರಿಯೆ:

**ಗ್ರಾಮ ಪಂಚಾಯಿತಿ:**

- ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಮಹಿಳೆಯರಿಗಾಗಿ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ರ್ಡ್/ಗ್ರಾಮ ಸಭೆಗಳನ್ನು ನಡೆಸಲು ಸುತ್ತೋಲೆಯಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ವಹಿಸುವುದು.

- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯಿತಿ ಗ್ರಂಥಾಲಯ ಆವರಣದಲ್ಲಿ ಮಹಿಳಾ ಸಶಕ್ತೀಕರಣದ ಬಗ್ಗೆ ಕನಿಷ್ಠ 06 ವಿಚಾರ ಸಂಕಿರಣ (ಸೆಮಿನಾರ್)/ಚರ್ಚೆ/ಉಪನ್ಯಾಸ ಕಾರ್ಯಕ್ರಮಗಳನ್ನು ಮುಖಾ-ಮುಖಿ, Youtube live ಮತ್ತು Facebook live ಮೂಲಕ ಆಯೋಜಿಸುವಂತೆ ಕ್ರಮಕೈಗೊಳ್ಳುವುದು.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಮಹಿಳಾ ಗ್ರಾಮ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ ಕುರಿತು ಮಹಿಳೆಯರಿಗೆ, ಎಲ್ಲಾ ಇಲಾಖೆಗಳ ಸ್ಥಳೀಯ ಸಿಬ್ಬಂದಿಗಳಿಗೆ, ಸ್ಥಳೀಯ ಮಹಿಳೆಯರಿಗೆ, ಮಹಿಳಾ ಸ್ವಸಹಾಯ/ಸ್ತ್ರೀಶಕ್ತಿ ಗುಂಪುಗಳಿಗೆ, ಸಂಜೀವಿನಿ ಕಾರ್ಯಕ್ರಮದ ಸಿಬ್ಬಂದಿಗಳಿಗೆ, ಸ್ಥಳಿಯ ಮಹಿಳಾ ಮತ್ತು ಯುವತಿ ಸಂಘಗಳಿಗೆ ಮಾಹಿತಿ ನೀಡುವುದು.
- ಪ್ರಸ್ತುತ NRLM ಅಡಿಯಲ್ಲಿ ನೋಂದಾಯಿತ ಸ್ವ-ಸಹಾಯ ಗುಂಪುಗಳ ಮಹಿಳೆಯರನ್ನು ಗ್ರಾಮ ಪಂಚಾಯಿತಿಯ ಗ್ರಂಥಾಲಯಕ್ಕೆ ಸದಸ್ಯತ್ವ ಮಾಡಿಸಿಕೊಳ್ಳುವುದು.
- ಮಹಿಳೆಯರ ಗ್ರಾಮ ಸಭೆಯ ಫೋಟೋ, ವೀಡಿಯೋ, ನಡವಳಿಗಳ ದಾಖಲೀಕರಣ ಮಾಡುವುದು ಹಾಗೂ ಸೂಚಿಸಲಾದ ನಮೂನೆಗಳಲ್ಲಿ ಮಾಹಿತಿಯನ್ನು ನಿಗದಿತ ಸಮಯದಲ್ಲಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.
- ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಕುರಿತು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿದ ನಮೂನೆಗಳಲ್ಲಿ ನಮೂದಿಸುವುದು.

**ತಾಲ್ಲೂಕು ಪಂಚಾಯಿತಿ:**

- ತಾಲ್ಲೂಕು ಮಟ್ಟದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಇವರು **ತಮ್ಮ ತಾಲ್ಲೂಕಿನ ಅಭಿಯಾನದ ನೋಡಲ್ ಅಧಿಕಾರಿಯಾಗಿ** ಜವಾಬ್ದಾರಿ ನಿರ್ವಹಿಸುವುದು.
- ಜಿಲ್ಲೆಯ **NRLMನ ಜಿಲ್ಲಾ ಯೋಜನಾ ವ್ಯವಸ್ಥಾಪಕರ ಸಹಯೋಗದಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲೆಯಲ್ಲಿರುವ ಕೌಶಲ್ಯ ತರಬೇತಿ (DDUGKY)ಸಂಬಂಧಿಸಿದ ಯೋಜನಾ ಅನುಷ್ಠಾನದ ಸಂಸ್ಥೆಗಳ (PIA)** ಮೂಲಕ ಆಯೋಜಿಸುವ ತರಬೇತಿಗಳು, ತರಬೇತಿಗೆ ನೋಂದಾಯಿಸಿಕೊಳ್ಳುವ ವಿಧಾನ, ತರಬೇತಿಯ ಅವಧಿ, ತರಬೇತಿಯ ಸ್ಥಳ, ತರಬೇತಿಯಿಂದ ಪ್ರಯೋಜನಗಳ ಕುರಿತು ಕಾರ್ಯಾಗಾರವನ್ನು ಎಲ್ಲಾ ಹೋಬಳಿ ಮಟ್ಟಗಳಲ್ಲಿ ಮಹಿಳಾ ವಾರ್ಡ್/ಗ್ರಾಮ ಸಭೆ ನಡೆಸುವ ಮುಂಚೆಯೇ ಆಯೋಜಿಸುವುದು(ಮಹಿಳಾ ವಾರ್ಡ್/ಗ್ರಾಮ ಸಭೆಗಳಲ್ಲಿ ಮಹಿಳೆಯರು ಸಾಂಪ್ರದಾಯಿಕ/ ಆಧುನಿಕ ಕೌಶಲ್ಯ ತರಬೇತಿ ಪಡೆಯಲು ಇಚ್ಛಿಸುವವರು ತಮ್ಮ ಬೇಡಿಕೆಗಳನ್ನು ಗ್ರಾಮ ಪಂಚಾಯಿತಿ ಡೆಸ್ಕ್‌ನಲ್ಲಿ ಸಲ್ಲಿಸಲು ಸಹಾಯವಾಗುವಂತೆ). ವಿಶೇಷವಾಗಿ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಹಿಳಾ ಕೂಲಿ ಕಾರ್ಮಿಕರುಗಳಿಗೆ ಅದರಲ್ಲಿಯೂ 90 ದಿವಸ ಮೇಲ್ಪಟ್ಟುಪೂರೈಸಿದ(RDPR Websiteನಲ್ಲಿ ಅವಳವಡಿಸಿದ ಪಟ್ಟಿಯನ್ನು ಆಧರಿಸಿ ಪರಿಗಣಿಸುವುದು.) ಮಹಿಳಾ ಕೂಲಿ ಕಾರ್ಮಿಕರಿಗೆ ಆದ್ಯತೆ ನೀಡಿ ಇತರೆ ಮಹಿಳೆಯರಿಗೂ ಈ ಕಾರ್ಯಗಾರದ ಸದುಪಯೋಗ ಪಡೆಯುವಂತೆ ಕ್ರಮಕೈಗೊಳ್ಳುವುದು.
- **ಮಹಿಳಾ ಗ್ರಾಮ ಸಭೆಗಳ ದಿನಾಂಕಗಳನ್ನು ನಿಗಧಿಗೊಳಿಸಿ, ವೇಳಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸುವುದು ಹಾಗೂ ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ತಿಳಿಸುವುದು.**
- ತಮ್ಮ ತಾಲ್ಲೂಕಿನಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ **08 ಮಾರ್ಚ್ ರಿಂದ 30 ಜೂನ್ 2023 ವರೆಗೆ 16 ವಾರಗಳ** ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ ಮತ್ತು ಮಹಿಳಾ ಗ್ರಾಮ ಸಭೆಗಳು ನಡೆಯುವಂತೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಈ ಪ್ರಕ್ರಿಯೆಯ ಉಸ್ತುವಾರಿ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ನೋಡಲ್ ಅಧಿಕಾರಿಯನ್ನು ನಿಯೋಜಿಸುವುದು.

- ಮಹಿಳಾ ಗ್ರಾಮ ಸಭೆಗಳು ನಡೆಯುವ ದಿನ ವಿವಿಧ ಇಲಾಖೆಗಳ ಸ್ಥಳೀಯ ಅಧಿಕಾರಿಗಳು/ಹೋಬಳಿ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿರಲು ಮತ್ತು ಮಹಿಳೆಯರಿಂದ ಮೂಡಿಬಂದ ಬೇಡಿಕೆ/ಸಮಸ್ಯೆ/ಪ್ರಶ್ನೆಗಳ ಪರಿಹಾರಕ್ಕೆ ಕಾಲಾವಧಿಯನ್ನು ನಿಗಧಿಗೊಳಿಸಿ ಅನುಷ್ಠಾನಗೊಳಿಸುವ ಸಂಬಂಧ ತಮ್ಮ ಅಧೀನ ಇಲಾಖಾ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವುದು.
- **ವಸ್ತು ಪ್ರದರ್ಶನ:** ಮಹಿಳಾ ಸ್ವಸಹಾಯ ಸಂಘಗಳಿಂದ ತಯಾರಿಸಿದ/ಉತ್ಪಾದಿಸಿದ ಸಾಮಾಗ್ರಿಗಳ/ಪದಾರ್ಥಗಳ ವಸ್ತು ಪ್ರದರ್ಶನವನ್ನು ತಾಲ್ಲೂಕು ಪಂಚಾಯಿತಿಯಿಂದ ಆಯೋಜಿಸುವುದು.
- **ಜೀವ-ವೈವಿಧ್ಯ ಸಸ್ಯಕ್ಷೇತ್ರ ಸ್ಥಾಪನೆ:** ತಾಲ್ಲೂಕಿನ ಒಂದು ಗ್ರಾಮ ಪಂಚಾಯಿತಿಯಲ್ಲಿ ಸ್ಥಳವನ್ನು ಗುರುತಿಸಿ ವಿವಿಧ ಬಗೆಯ ಔಷಧಿ ಮತ್ತು ಇತರೆ ಸಸ್ಯಗಳನ್ನು ಬೆಳೆಸಲು ಸಾಮಾಜಿಕ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಜೀವ-ವೈವಿಧ್ಯ ಸಸ್ಯಕ್ಷೇತ್ರ ಸ್ಥಾಪನೆಯನ್ನು ಮೇ-22ರಂದು ಚಾಲನೆ ನೀಡುವುದು ಹಾಗೂ ಇದರ ಸಂಪೂರ್ಣ ನಿರ್ವಹಣೆಯನ್ನು ದಾಖಲಾದ ಪಂಚಾಯಿತಿಯ SHG/GPLFಗಳಿಗೆ ವಹಿಸುವುದು.

**ಜಿಲ್ಲಾ ಪಂಚಾಯಿತಿ:**

- ಜಿಲ್ಲಾ ಮಟ್ಟದಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಮ್ಮ ಜಿಲ್ಲೆಯಲ್ಲಿ **08 ಮಾರ್ಚ್ ರಿಂದ 30 ಜೂನ್ 2023** ವರೆಗೆ 16 ವಾರಗಳ **ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನದ ನೋಡಲ್ ಅಧಿಕಾರಿಯಾಗಿ** ಜವಬ್ದಾರಿ ನಿರ್ವಹಿಸುವುದು.
- ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ಹಾಗೂ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸಿ ಅವರಿಗೆ ತಾಲ್ಲೂಕು/ಗ್ರಾಮ ಪಂಚಾಯಿತಿಗಲ್ಲಿ ತೊಡಗಿಸಿಕೊಳ್ಳಲು ಹಾಗೂ ತಾಂತ್ರಿಕ ಬೆಂಬಲ ನೀಡಲು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮವಹಿಸುವುದು. (ಸ್ವಯಂ ಸೇವಾ ಸಂಸ್ಥೆಗಳಿಗೆ ಈ ಅಭಿಯಾನದಡಿಯಲ್ಲಿ ಯಾವುದೇ ಆರ್ಥಿಕ ಸಹಾಯ/ಬೆಂಬಲ ನೀಡಲಾಗುವುದಿಲ್ಲ)
- ಅಭಿಯಾನದ ಅವಧಿಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಚಟುವಟಿಕೆ/ಕಾರ್ಯಕ್ರಮಗಳು, ಮಹಿಳಾ ಗ್ರಾಮ ಸಭೆ, ಯೋಜನೆ ತಯಾರಿ ಮತ್ತು ಅನುಷ್ಠಾನ ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿಗಳನ್ನಾಗಿಸಲು ಖಾತರಿ ಪಡಿಸಿಕೊಳ್ಳುವುದು.
- **ವಸ್ತು ಪ್ರದರ್ಶನ:** ಮಹಿಳಾ ಸ್ವಸಹಾಯ ಸಂಘಗಳಿಂದ ತಯಾರಿಸಿದ/ಉತ್ಪಾದಿಸಿದ ಸಾಮಾಗ್ರಿಗಳ/ಪದಾರ್ಥಗಳ ವಸ್ತು ಪ್ರದರ್ಶನವನ್ನು ಜಿಲ್ಲಾ ಪಂಚಾಯಿತಿಯಿಂದ ಆಯೋಜಿಸುವುದು.
- **ಸಸಿ ನೆಡುವ ಕಾರ್ಯಕ್ರಮ:** ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ 16 ವಾರಗಳ ಅವಧಿಯಲ್ಲಿ ಯಾವುದಾದರೂ ಒಂದು ದಿನ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಿ ನುಗ್ಗೇಕಾಯಿ ಸೇವನೆಯಿಂದ ಆರೋಗ್ಯ ಅನುಕೂಲತೆಗಳು ಮತ್ತು ಪೌಷ್ಠಿಕಾಂಶದ ಮಹತ್ವದ ಕುರಿತು ಸಮುದಾಯದಲ್ಲಿ ಅರಿವು ಮೂಡಿಸುವುದು.
- **NRLM ವತಿಯಿಂದ ತರಬೇತಿ ಕಾರ್ಯಕ್ರಮ:**
  - ➢ ಜಿಲ್ಲೆಯ NRLMನ ಜಿಲ್ಲಾ ಯೋಜನಾ ವ್ಯವಸ್ಥಾಪಕರ ಸಹಯೋಗದಲ್ಲಿ ಜಿಲ್ಲೆಯಲ್ಲಿರುವ ಕೌಶಲ್ಯ ತರಬೇತಿ(DDUGKY)ಸಂಬಂಧಿಸಿದ ಯೋಜನಾ ಅನುಷ್ಠಾನದ ಸಂಸ್ಥೆಗಳ (PIA) ಮೂಲಕ ಆಯೋಜಿಸುವ ತರಬೇತಿಗಳು, ತರಬೇತಿಗೆ ನೋಂದಾಯಿಸಿಕೊಳ್ಳುವ ವಿಧಾನ, ತರಬೇತಿಯ ಅವಧಿ, ತರಬೇತಿಯ ಸ್ಥಳ, ತರಬೇತಿಯಿಂದ ಪ್ರಯೋಜನಗಳ ಕುರಿತು ವಿವರವಾದ ಮಾಹಿತಿಯನ್ನು youtube live ಮೂಲಕ ಎಲ್ಲಾ ಗ್ರಾಮ ಪಂಚಾಯಿತಿಯಲ್ಲಿಮಹಿಳೆಯರು ಭಾಗವಹಿಸಿ ವೀಕ್ಷಿಸಲು/ ಕೇಳಲು

ಅನುಕೂಲವಾಗುವಂತೆ ಏಕಕಾಲದಲ್ಲಿ **ಮಾರ್ಚ್-8ರಂದು** ಜಿಲ್ಲಾ ಪಂಚಾಯಿತಿಯಿಂದ ಸಂಘಟಿಸಿ ಆಯೋಜಿಸುವುದು. ಹಾಗೂ ಈ ತರಬೇತಿ ಕಾರ್ಯಕ್ರಮವನ್ನು ANSSIRD & PR youtube ಚಾನೆಲ್‌ನಲ್ಲಿ ಅಳವಡಿಸುವುದು.

- ಈ ವಿವಿಧ ತರಬೇತಿಗಳ ಮಾಹಿತಿಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಮಹಿಳೆಯರು ಸದುಪಯೋಗ ಪಡೆದುಕೊಳ್ಳಲು ಕ್ರಮಕೈಗೊಳ್ಳುವುದು.

**2023 ಮಾರ್ಚ್-08 ರಂದು "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ"** ಅಂಗವಾಗಿ ಆಯುಕ್ತಾಲಯದ ಸುದ್ದಿಯೋದಲ್ಲಿ ಬೆಳಗ್ಗೆ 11.00 ಗಂಟೆಗೆ Youtube ಚಾನೆಲ್ ಮುಖಾಂತರ **"ಸಮುದಾಯ ರೇಡಿಯೋ ಪ್ರಸಾರದ ಕಾರ್ಯಕ್ರಮಕ್ಕೆ" ಚಾಲನೆ ನೀಡಲಾಗುವುದು.** ಈ ಕಾರ್ಯಕ್ರಮದ ವಿವರಗಳು ಮತ್ತು Youtube Link ಅನ್ನು ತದನಂತರದಲ್ಲಿ ತಿಳಿಸಲಾಗುವುದು. ಸದರಿ ದಿನ ಗ್ರಾಮ ಪಂಚಾಯಿತಿಯಲ್ಲಿ ಮಹಿಳೆಯರ ವಿಶೇಷ ಗ್ರಾಮ ಸಭೆಯನ್ನು ಆಯೋಜಿಸಿ, ಈ ಸಭೆಗೆ ಪಂಚಾಯಿತಿ ವ್ಯಾಪ್ತಿಯ 10 ಹದಿಹರೆಯದ ಹೆಣ್ಣು ಮಕ್ಕಳನ್ನು ಸೇರಿಸಿ **"ಸಮುದಾಯ ರೇಡಿಯೋ ಪ್ರಸಾರದ"** ಕಾರ್ಯಕ್ರಮದಲ್ಲಿ ಭಾಗವಹಿಸಲು ಕ್ರಮ ವಹಿಸುವುದು.

**"ಸಮುದಾಯ ರೇಡಿಯೋ ಪ್ರಸಾರದ"** ಕಾರ್ಯಕ್ರಮದ ಚಾಲನೆಯ ನಂತರ ಸ್ಥಳೀಯವಾಗಿ ಹದಿಹರೆಯದ ಹೆಣ್ಣು ಮಕ್ಕಳು, ಮಹಿಳಾ ಅಧ್ಯಕ್ಷರು, ಮಹಿಳಾ ನರೇಗಾ ಫಲಾಭವಿಯು ತಮ್ಮ ಅನುಭವಗಳನ್ನು ಹಂಚಿಕೊಳ್ಳುವಂತೆ ತಿಳಿಸುವುದು ಹಾಗೂ ತರಬೇತಿ ಪಡೆದಿರುವ GPTF ಮಹಿಳಾ ಸದಸ್ಯರಲ್ಲಿ ಒಬ್ಬರು ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ ಕಾರ್ಯಕ್ರಮದ ಮಹತ್ವವನ್ನು ತಿಳಿಸುವುದರ ಜೊತೆಗೆ ಅಪೌಷ್ಠಿಕತೆ ಮತ್ತು ರಕ್ತಹೀನತೆ ಬಗ್ಗೆ ಒತ್ತು ಕೊಟ್ಟು ಎಲ್ಲಾರು ಒಂದು ಪ್ರತಿಜ್ಞೆಯನ್ನು ಮಾಡಲು ಕ್ರಮ ವಹಿಸುವುದು.

ಈ ಮೇಲೆ ವಿವರಿಸಿರುವಂತೆ, ಜಿಲ್ಲಾ ಮಟ್ಟದಿಂದ ಗ್ರಾಮ ಪಂಚಾಯಿತಿ ಮಟ್ಟದವರೆಗಿನ ಎಲ್ಲಾ ಅಧಿಕಾರಿಗಳು, ಸ್ಥಳೀಯ ಸಮುದಾಯ ಮತ್ತು ಅಧಿಕಾರೇತರರನ್ನು ತೊಡಗಿಸಿಕೊಂಡು **2023 ಮಾರ್ಚ್ 08 ರಿಂದ 2023 ಜೂನ್ 30 ವರೆಗೆ** 16 ವಾರಗಳ ಕಾಲ ನಡೆಸಲಾಗುವ **"ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"**ವನ್ನು ಪರಿಣಾಮಕಾರಿಯಾಗಿ ನಡೆಸಿ, ಗ್ರಾಮ ಪಂಚಾಯತಿಗಳಿಂದ ಸುಸ್ಥಿರ ಗುರಿಗಳ ಸಾಧನೆ ಮೂಲಕ ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿಗಳನ್ನಾಗಿಸಲು ಸೂಚಿಸಿದೆ.

"ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮತ್ತು ಸುಸ್ಥಿರ ಗುರಿಗಳ ಸಾಧನೆ ಮೂಲಕ ಮಹಿಳಾ ಸ್ನೇಹಿ ಪಂಚಾಯತಿಗಳನ್ನಾಗಿಸಲು ಸರ್ಕಾರದ ವಿವಿಧ ಇಲಾಖೆಗಳ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳು ಭಾಗವಹಿಸಲು ಮತ್ತು ಸಮನ್ವಯತೆಯಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಸಂಬಂಧಿಸಿದಂತೆ ತಮ್ಮ ಇಲಾಖೆಯ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ರಾಜ್ಯ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಕೋರಿದೆ.

(ಉಮಾ ಮಹಾದೇವನ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
4. ಕಛೇರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆರವರ ಆಪ್ತ ಕಾರ್ಯದರ್ಶಿ.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ,ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
8) ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಆಪ್ತ ಕಾರ್ಯದರ್ಶಿ.
9) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರ ಆಪ್ತ ಕಾರ್ಯದರ್ಶಿ.
10) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆರವರ ಆಪ್ತ ಕಾರ್ಯದರ್ಶಿ.
11) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆರವರ ಆಪ್ತ ಕಾರ್ಯದರ್ಶಿ.
12) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ
13) ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಆಪ್ತ ಕಾರ್ಯದರ್ಶಿ.
14) ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರ ಆಪ್ತ ಕಾರ್ಯದರ್ಶಿ.
15) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು.
16) ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
17) ಅಭಿಯಾನ ನಿರ್ದೇಶಕರು, ಸಂಜೀವಿನಿ, ಕೆ.ಎಸ್.ಆರ್.ಎಲ್.ಪಿ.ಎಸ್.ಬೆಂಗಳೂರು.
18) ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಇವರ ಆಪ್ತ ಸಹಾಯಕರು.
19) ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕಭವನ, ಬೆಂಗಳೂರು
20) ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ,ಬೆಂಗಳೂರು
21) ನಿರ್ದೇಶಕರು, ಮಕ್ಕಳ ಸಂರಕ್ಷಣಾ ನಿರ್ದೇಶನಾಲಯ/ಐ.ಸಿ.ಪಿ.ಎಸ್.ಕರ್ನಾಟಕ ಸರ್ಕಾರ, ಬೆಂಗಳೂರು.
22) ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು

23) ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು, ಕೆ.ಜಿ.ರಸ್ತೆ, ಬೆಂಗಳೂರು
24) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
25) ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು.
26) ನಿರ್ದೇಶಕರು, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು.
27) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
28) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
29) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ .

# ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ 2023

## ಅನುಬಂಧ-ಎ

## ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ ಅಂಗವಾಗಿ 16 ವಾರಗಳ ಕಾಲ ಗ್ರಾಮ ಪಂಚಾಯಿತಿಗಳಿಂದ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮ/ಚಟುವಟಿಕೆಗಳ ವಿವರ

| ಮಾರ್ಚ್ 2023 | ವಿಶೇಷ ದಿನಗಳು | ಅಳವಡಿಸಿಕೊಳ್ಳಬೇಕಾದ ವಿಷಯಗಳು | ಕಾರ್ಯಕ್ರಮ/ಚಟುವಟಿಕೆಗಳು |
|---|---|---|---|
| 1 ನೇ ವಾರ<br>(08 ರಿಂದ 14 ಮಾರ್ಚ್ 2023) | **08 ನೇ ಮಾರ್ಚ್: ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ** | ಪೂರ್ವ ತಯಾರಿ<br><br>ಆಯುಕ್ತಾಲಯದ ಸುದ್ದಿಯೋದಿಂದ ಬೆಳಗ್ಗೆ 11.00 ಗಂಟೆಗೆ Youtube ಚಾನೆಲ್ ಮುಖಾಂತರ ಪ್ರಸಾರಗೊಳ್ಳುವ **ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ** ಮತ್ತು **"ಸಮುದಾಯ ರೇಡಿಯೋ ಪ್ರಸಾರ ಕಾರ್ಯಕ್ರಮದ ಚಾಲನೆ ಹಾಗೂ ಚರ್ಚಾ ಗೋಷ್ಠಿಯ ವೀಕ್ಷಣೆ.** ಪ್ರಸಾರದ ನಂತರ ಸ್ಥಳೀಯವಾಗಿ ಕಾರ್ಯಕ್ರಮ ಮುಂದುವರಿಸುವುದು. | 5 ನೇ ಮಾರ್ಚ್ ರೊಳಗೆ ಕಾರ್ಯಕ್ರಮದ ಚಾಲನೆಗೆ ಪೂರ್ವತಯಾರಿ ನಡೆಸುವುದು.<br><br>ಚಾಲನೆಯ ದಿನ ಗ್ರಾಮ ಪಂಚಾಯಿತಿಯಲ್ಲಿ ಮಹಿಳಾ ಅಧ್ಯಕ್ಷರು/ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿಶೇಷ ಗ್ರಾಮ ಸಭೆ ಆಯೋಜಿಸುವುದು.<br>ಮಹಿಳೆಯರ ಜೊತೆಗೆ ನರೇಗಾ ಫಲಾಭವಿಗಳು ಮತ್ತು ಪಂಚಾಯಿತಿ ವ್ಯಾಪ್ತಿಯ 10 ಹದಿಹರೆಯದ ಹೆಣ್ಣು ಮಕ್ಕಳನ್ನು ಸೇರಿಸುವುದು. ಪ್ರಸಾರ ಕಾರ್ಯಕ್ರಮದ ನಂತರ ಸ್ಥಳೀಯವಾಗಿ ಹದಿಹರೆಯದ ಹೆಣ್ಣು ಮಕ್ಕಳು, ಮಹಿಳಾ ಅಧ್ಯಕ್ಷರು/ಉಪಾಧ್ಯಕ್ಷರು ಮಹಿಳಾ ನರೇಗಾ ಫಲಾಭವಿಯು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದು.<br>ತರಬೇತಿ ಪಡೆದಿರುವ GPTF ಮಹಿಳಾ ಸದಸ್ಯರಲ್ಲಿ ಒಬ್ಬರು ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ ಕಾರ್ಯಕ್ರಮದ ಮಹತ್ವವನ್ನು ತಿಳಿಸುವುದರ ಜೊತೆಗೆ ಅಪೌಷ್ಠಿಕತೆ ಮತ್ತು ರಕ್ತಹೀನತೆಯ ಬಗ್ಗೆ ಮಾಹಿತಿ ನೀಡಿ ಮುಕ್ತಗೊಳಿಸುವ ಬಗ್ಗೆ ಎಲ್ಲರೂ ಪ್ರತಿಜ್ಞೆಯನ್ನು ಮಾಡುವುದು. |
| | | ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಮತ್ತು ಗ್ರಾಮ ಪಂಚಾಯಿತಿ | ಜಾಗೃತಿ ಕಾರ್ಯಕ್ರಮ, ಜಾಥಾ ಕಾರ್ಯಕ್ರಮ,ಕರಪತ್ರ, ನಾಮ ಫಲಕ, ಧ್ವನಿವರ್ಧಕಗಳ ಮೂಲಕ ಪ್ರಚಾರ. |

| | | | |
|---|---|---|---|
| | **9 ರಿಂದ 14 ಮಾರ್ಚ್ 2023** | ಆರೋಗ್ಯ ಅಮೃತ ಅಭಿಯಾನದ (GPAA) ಉದ್ದೇಶಗಳು ಹಾಗೂ ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳ ಕುರಿತು ಜಾಗೃತಿ ಮತ್ತು ಆರೋಗ್ಯ ತಪಾಸಣೆ ಶಿಬಿರಗಳ ಆಯೋಜನೆ | ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ.<br>ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸ್ಥಳೀಯ ಮಹಿಳೆಯರಿಗೆ ಸನ್ಮಾನ ಕಾರ್ಯಕ್ರಮ ನಡೆಸುವುದು.<br><br>ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ, ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಕಾರ್ಮಿಕರು, ಮಹಿಳಾ ಕಾಯಕ ಬಂಧುಗಳು, ಸ್ವಸಹಾಯ ಗುಂಪುಗಳ ಮಹಿಳೆಯರಿಗೆ , ರಾಷ್ಟ್ರೀಯ ಜೀವನೋಪಾಯ ಯೋಜನೆಯ ಮಹಿಳಾ ಕಾರ್ಯಕರ್ತರುಗಳಿಗೆ ವಿಶೇಷ ಆರೋಗ್ಯ ಶಿಬಿರಗಳನ್ನು ಆಯೋಜಿಸಿ ಆರೋಗ್ಯ ತಪಾಸಣೆ ನಡೆಸುವುದು.<br><br>ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ಬಳಲುತ್ತಿರುವ ಅಗತ್ಯ ಮಕ್ಕಳಿಗೆ , ಕಿಶೋರಿಯರಿಗೆ ಮತ್ತು ಮಹಿಳೆಯರಿಗೆ ಐಎಫ್ಎ (IFA) ಮಾತ್ರೆಗಳ ಪೂರೈಕೆ ಮತ್ತು ಪೌಷ್ಟಿಕ ಆಹಾರ ದೊರೆಯುವಂತೆ ನೋಡಿಕೊಳ್ಳುವುದು. |
| 02 ನೇ ವಾರ (15 ರಿಂದ 21 ಮಾರ್ಚ್ 2023) | **16 ನೇ ಮಾರ್ಚ್: ರಾಷ್ಟ್ರೀಯ ಚುಚ್ಚುಮದ್ದು ದಿನ** | ಮಕ್ಕಳಿಗೆ ಚುಚ್ಚುಮದ್ದು ಮತ್ತು ಲಸಿಕೆಗಳ ಪ್ರಾಮುಖ್ಯತೆ. | ಜಾಥಾ ಕಾರ್ಯಕ್ರಮ ಕರಪತ್ರ, ನಾಮ ಫಲಕ, ಧ್ವನಿವರ್ಧಕಗಳ ಮೂಲಕ ಪ್ರಚಾರ ಮತ್ತು ಅರಿವು ಮೂಡಿಸುವುದು. ಮಕ್ಕಳಿಗೆ ಲಸಿಕೆ ಹಾಕಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು. |
| | | ಸಾಮಾಜಿಕ ಅರಣ್ಯ ಇಲಾಖೆಯ | ಸಮುದಾಯಗಳಿಗೆ ಅರಿವು ಕಾರ್ಯಕ್ರಮ. |

| | | | |
|---|---|---|---|
| | **21st ಮಾರ್ಚ್ ವಿಶ್ವ ಅರಣ್ಯ ದಿನ** | ಸಹಯೋಗದೊಂದಿಗೆ ಸಸಿ ನೆಡುವ ಕಾರ್ಯಕ್ರಮ. | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರದ ಕಟ್ಟಡಗಳ ಆವರಣಗಳಲ್ಲಿ ಸಸಿ ನೆಡುವುದು.<br>ಮೊದಲೆ ನೆಟ್ಟ ಸಸಿಗಳಿಗೆ ನೀರು ಹಾಕುವುದು.<br>ಅರಣ್ಯ ಮತ್ತು ಕೃಷಿಅರಣ್ಯದ ಮಹತ್ವದ ಬಗ್ಗೆ ಅರಿವು ಮುಡಿಸುವುದು. |
| 03 ನೇ ವಾರ (22 ರಿಂದ 28 ಮಾರ್ಚ್ 2023) | **22 ನೇ ಮಾರ್ಚ್: ವಿಶ್ವ ಜಲ ದಿನ** | ನೀರಿನ ಮಹತ್ವ, ಮಿತ ಬಳಕೆ ಮತ್ತು ಸಂರಕ್ಷಣೆ.<br>ಮಳೆ ನೀರು ಕೊಯ್ಲು/ಸಂಗ್ರಹಣೆ.<br>ನೀರು ಮತ್ತು ಸಾಬೂನು ಕೊರೋನಾದ ವಿರುದ್ಧ ಹೇಗೆ ಪ್ರಬಲವಾಗಿದೆ. | ಮಳೆ ನೀರು ಕೊಯ್ಲು/ಸಂಗ್ರಹಣೆ ಕುರಿತು ಸಮುದಾಯಗಳಲ್ಲಿ ಜಾಗೃತಿ ಕಾರ್ಯಕ್ರಮ.<br>ಸ್ವ ಸಹಾಯ ಸಂಘಗಳೊಂದಿಗೆ ಗುಂಪು ಚರ್ಚೆ.<br>ಕೃಷಿ ಚಟುವಟಿಕೆಯಲ್ಲಿ ನೀರಿನ ಮಿತ ಬಳಕೆ, ಈ ಕುರಿತು ವಿವಿದ ಇಲಾಖೆಗಳ ಯೋಜನೆಗಳನ್ನು ತಿಳಿಸುವ ಬಗ್ಗೆ ಉಪನ್ಯಾಸ ಕಾರ್ಯಕ್ರಮ.<br>ನೀರಿನ ಮೌಲ್ಯ ಅಥವಾ ಮಹತ್ವ ಕುರಿತು ಪೋಸ್ಟರ್ ತಯಾರಿ, ಪ್ರಭಂದ ಸ್ಪರ್ದೆ ನಡೆಸುವುದು. |
| | **24 ನೇ ಮಾರ್ಚ್: ವಿಶ್ವ ಕ್ಷಯ ರೋಗ (ಟಿ.ಬಿ.) ದಿನ** | ಕ್ಷಯ ರೋಗದ ಉಚಿತ ಪರೀಕ್ಷೆ ಮತ್ತು ಸೇವೆಗಳ ಕುರಿತು ಔಷದೋಪಚಾರದ ಸರಿಯಾದ ಕ್ರಮ ಹಾಗೂ ಕ್ಷಯರೋಗಿಗಳಿಗೆ ಬೆಂಬಲ ಕುರಿತು. | ಜಾಗೃತಿ ಕಾರ್ಯಕ್ರಮ<br>ಸ್ವ ಸಹಾಯ ಸಂಘಗಳೊಂದಿಗೆ ಗುಂಪು ಚರ್ಚೆ.<br>ಕ್ಷಯರೋಗದ ಸ್ವಯಂ ಸೇವಕರನ್ನು ಮತ್ತು ಚಾಂಪಿಯನ್ನಗಳನ್ನು ಗುರುತಿಸಿ ಪ್ರೇರೇಪಿಸುವುದು.<br>ವೈದ್ಯಕೀಯ ಚಿಕಿತ್ಸೆಗಳ ಲಭ್ಯತೆಯನ್ನು ತಿಳಿಯಪಡಿಸುವುದು.<br>ಡಾಟ್ ಕೇಂದ್ರಗಳ ಹಾಗೂ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ |
| 04ನೇ ವಾರ (29 ಮಾರ್ಚ್ ರಿಂದ 04 ಏಪ್ರಿಲ್ 2023) | **ಸ್ವಚ್ಚ ಭಾರತ್ ಮಿಷನ್** | ಸ್ವಚ್ಚ ಭಾರತ್ ಮಿಷನ್‌ನ ಪ್ರಾಮುಖ್ಯತೆ, ಆಯ ವ್ಯಯ | ಜಾಥಾ ಕಾರ್ಯಕ್ರಮ |

| | | | |
|---|---|---|---|
| | | ಮತ್ತು ಸಮುದಾಯದ ಜವಬ್ದಾರಿಗಳು | ಕರಪತ್ರ, ನಾಮ ಫಲಕ, ಧ್ವನಿವರ್ಧಕಗಳ ಮೂಲಕ ಪ್ರಚಾರ ಮತ್ತು ಅರಿವು ಮೂಡಿಸುವುದು.<br><br>ಶೌಚಾಲಯ ನಿರ್ಮಾಣ ಮತ್ತು ನಿರ್ವಹಣೆ ಬಗ್ಗೆ ತಿಳಿಯಪಡಿಸುವುದು. |
| | **ಲಿಂಗ ಸಮಾನತೆ** | ಮಹಿಳಾ ಸಮಾನತೆ, ಮಹಿಳಾ ಹಕ್ಕುಗಳು, ಮಹಿಳಾ ಕಾನೂನುಗಳ ಬಗ್ಗೆ, | ಮಹಿಳಾ ವಿರೋಧಿ ಆಚರಣೆಗಳ ಬಗ್ಗೆ ಹಾಗೂ ಲಿಂಗಾಧಾರಿತ ದೌರ್ಜನ್ಯಗಳ ಬಗ್ಗೆ , ಮಹಿಳಾ ಕಾನೂನುಗಳ ಬಗ್ಗೆ ಗ್ರಾಮದ ಜನರಿಗೆ ಅರಿವು ಮೂಡಿಸುವುದು.<br><br>ಲಿಂಗ ಸಮಾನತೆ, ಮಹಿಳೆಯರ ಮೇಲಿನ ದೌರ್ಜನ್ಯ ತಡೆ, ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆ ಕುರಿತು ಚರ್ಚಾ ಗೋಷ್ಠಿಗಳನ್ನು ಸಂಗಟಿಸುವುದು. |
| **ಏಪ್ರಿಲ್ 2023** | **ವಿಶೇಷ ದಿನಗಳು** | **ಅಳವಡಿಸಿಕೊಳ್ಳಬೇಕಾದ ವಿಷಯಗಳು** | **ಕಾರ್ಯಕ್ರಮ/ಚಟುವಟಿಕೆಗಳು** |
| 05 ನೇ ವಾರ (05 ರಿಂದ 11 ಏಪ್ರಿಲ್ 2023)<br><br>ಮತ್ತು<br><br>06 ನೇ ವಾರ (12 ರಿಂದ 18 ಏಪ್ರಿಲ್ 2023) | **11 ನೇ ಏಪ್ರಿಲ್ : ರಾಷ್ಟ್ರೀಯ ತಾಯ್ತನ ಸುರಕ್ಷತಾ ದಿನ** | ಮಹಿಳೆಯರ ಆರೋಗ್ಯ : ಗರ್ಭನಿರೋಧಕಗಳ ಬಗ್ಗೆ ಜಾಗೃತಿ, ಸುರಕ್ಷಿತ ಗರ್ಭಪಾತ, ಸುರಕ್ಷಿತ ಗರ್ಭಧಾರಣೆ, ಗರ್ಭಿಣಿಯರಿಗೆ ಮತ್ತು ಹಾಲುಣಿಸುವ ತಾಯಿಗೆ ಪೌಷಕಾಂಶ ಕುರಿತು ಅರಿವು ಮೂಡಿಸುವುದು. | ಸರ್ಕಾರದ ವಿವಿದ ಯೋಜನೆಗಳ ಕುರಿತು ಜಾಗೃತಿ ಕಾರ್ಯಕ್ರಮ.<br><br>ಸ್ವ ಸಹಾಯ ಸಂಘಗಳೊಂದಿಗೆ ಗುಂಪು ಚರ್ಚೆ.<br><br>ಗರ್ಭಧಾರಣ ಮತ್ತು ಪ್ರಸವ ಪೂರ್ವ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆಯ ವಿಷಯದ) ಕಾಯಿದೆ ಕುರಿತು ಸಮುದಾಯಕ್ಕೆ ಅರಿವು ಮೂಡಿಸುವುದು. |
| | **14 ನೇ ಏಪ್ರಿಲ್ ಡಾ: ಅಂಬೇಡ್ಕರ್ ಜನ್ಮದಿನ** | **ಸಂವಿಧಾನ ಮತ್ತು ಮಹಿಳಾ ಸಬಲೀಕರಣ** | ಮಹಿಳೆಯರಿಗೆ ಕಾನೂನು ಅರಿವು ಕಾರ್ಯಕ್ರಮಗಳು<br><br>**ಸ್ಥಳೀಯ ಸಂಪನ್ಮೂಲ ವ್ಯಕ್ತಿ ಅಥವಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ( ಈ ಕೆಳಗೆ ನೀಡಲಾದ ಕಾನೂನು/ವಿಷಯಗಳ ಕುರಿತು) |

| | | | |
|---|---|---|---|
| 07 ನೇ ವಾರ<br>(19 ರಿಂದ 25 ನೇ ಏಪ್ರಿಲ್ 2023) | **22 ನೇ ಎಪ್ರಿಲ್ :<br>ವಿಶ್ವ ಭೂಮಿ ದಿನ** | ಗಿಡ ಮರಗಳ ಮಹತ್ವ ಮತ್ತು ಮಣ್ಣಿನ ಸಂರಕ್ಷಣೆ. (ಅರಣ್ಯೀಕರಣ)<br><br>ವಿಪತ್ತು ನಿರ್ವಹಣೆ- ಸಮುದಾಯ ಸಹಭಾಗಿತ್ವ.<br><br>ಮಣ್ಣಿನ ಮಹತ್ವ ಮತ್ತು ಸವಕಳಿ | ಪ್ಲಾಸ್ಟಿಕ್‌ನ ನಿಷೇದದ ಬಗ್ಗೆ ಜಾಗೃತಿ ಕಾರ್ಯಕ್ರಮ.<br><br>ಸಾವಯವ ಕೃಷಿಗೆ ಉತ್ತೇಜನ ನೀಡುವುದು ಹಾಗೂ ಮಣ್ಣಿನ ಜೈವಿಕ ಪ್ರಕ್ರಿಯೆ ಬಗ್ಗೆ ತಿಳಿಸುವುದು.<br><br>ವಿಪತ್ತು ನಿರ್ವಣೆ-ಪೂರ್ವ ತಯಾರಿ, ತಡೆಗಟ್ಟುವಿಕೆ, ಸಮುದಾಯದ ಸಹಭಾಗಿತ್ವ ಕುರಿತು ತಿಳಿಸುವುದು.<br><br>ಮಣ್ಣಿನ ಮಹತ್ವ ಮತ್ತು ಸವಕಳಿ ಬಗ್ಗೆ ಉಪನ್ಯಾಸನ ಕಾರ್ಯಕ್ರಮ |
| | **24 ನೇ ಎಪ್ರಿಲ್ :<br>ರಾಷ್ಟ್ರೀಯ ಪಂಚಾಯತ್ ರಾಜ್ ದಿನ** | ವಿಕೇಂದ್ರೀಕರಣದ ಉದ್ದೇಶ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಮೀಸಲಾತಿ, ಗ್ರಾಮ/ವಾರ್ಡ್ ಸಭೆಯ ಮಹತ್ವ, ಮಹಿಳೆಯರ ಭಾಗವಹಿಸುವಿಕೆ. | ಜಾಗೃತಿ ಕಾರ್ಯಕ್ರಮ<br>ಜಾಥಾ ಕಾರ್ಯಕ್ರಮ.<br>ಉಪನ್ಯಾಸ ಮತ್ತು ಕಾರ್ಯಾಗಾರ ನಡೆಸುವುದು.<br>ಕರಪತ್ರ, ನಾಮ ಫಲಕ, ಗೋಡೆಬರಹ, ಧ್ವನಿವರ್ಧಕಗಳ ಮೂಲಕ ಪ್ರಚಾರ |
| 08 ನೇ ವಾರ<br>(26 ರಿಂದ 02 ನೇ ಮೇ 2023) | ಜೀವನೋಪಾಯ ಕಾರ್ಯಕ್ರಮ | ದೀನ್ ದಯಾಲ್ ಉಪಾಧ್ಯಾಯ್ ಗ್ರಾಮೀಣ ಕೌಶಲ್ಯ ಯೋಜನಾ | ಡಿಡಿಯುಜಿಕೆವೈ ಯೋಜನೆಯ ಸೌಲಭ್ಯಗಳನ್ನು ತಿಳಿಸಲು ಕಾರ್ಯಕ್ರಮಗಳನ್ನು ಆಯೋಜಿಸುವುದು. ಜಿಲ್ಲೆಯಲ್ಲಿನ ಡಿಡಿಯುಜಿಕೆವೈ ತರಬೇತಿ ಕೇಂದ್ರಗಳ ಮೂಲಕ ತರಬೇತಿಗಳನ್ನು ಆಯೋಜಿಸುವುದು. |
| | **01ನೇ ಮೇ:<br>ಮೇ ಡೇ- ಕಾರ್ಮಿಕರ ದಿನ<br><br>ಸಮಾನ ವೇತನ** | ಕಾರ್ಮಿಕರ ದಿನಾಚರಣೆಯ ಮಹತ್ವ.<br>ಜೀವನೋಪಾಯ ಯೋಜನೆಗಳ ಕುರಿತು ಅರಿವು.<br>(ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ) | ಜಾಥಾ ಕಾರ್ಯಕ್ರಮ<br>ಕರಪತ್ರ, ನಾಮ ಫಲಕ, ಧ್ವನಿವರ್ಧಕಗಳ ಮೂಲಕ ಪ್ರಚಾರ.<br><br>ಮಹಿಳೆಯರಿಗೆ ಜಾಬ್ ಕಾರ್ಡ್ ವಿತರಣೆ.<br>ಕಾನೂನು ಸೇವಾ ಪ್ರಾಧಿಕಾರದ ಜೊತೆ ಕಾರ್ಮಿಕ ಕಾಯಿದೆಗಳ ಕುರಿತು ಅರಿವು ಕಾರ್ಯಕ್ರಮ ನಡೆಸುವುದು.<br><br>ಮಹಿಳಾ ಸ್ವಸಹಾಯ ಸಂಘಗಳು ಉತ್ಪಾದಿಸಿ/ತಯಾರಿಸಿದ ವಸ್ತುಗಳ ಮಾರಾಟಕ್ಕೆ ವಸ್ತು ಪ್ರದರ್ಶನ ಆಯೋಜಿಸುವುದು. |

| | | | |
|---|---|---|---|
| | | | ರೋಜ್‌ಗಾರ್ ದಿನಾಚರಣೆ. |
| **ಮೇ 2023** | **ವಿಶೇಷ ದಿನಗಳು** | **ಅಳವಡಿಸಿಕೊಳ್ಳಬೇಕಾದ ವಿಷಯಗಳು** | **ಕಾರ್ಯಕ್ರಮ/ಚಟುವಟಿಕೆಗಳು** |
| 09 ನೇ ವಾರ (3 ರಿಂದ 9 ಮೇ 2023) | **04 ನೇ ಮೇ: ವಿಶ್ವ ಅಸ್ತಮಾ ದಿನ** | ಅಸ್ತಮಾ ಕಾಯಿಲೆ ಕುರಿತು. | ಅಸ್ತಮಾ ಕಾಯಿಲೆಯ ಪರಿಣಾಮ ಕುರಿತು ಅರಿವು ಕಾರ್ಯಕ್ರಮ. |
| | **09 ನೇ ಮೇ: ವಿಶ್ವ ತಾಯಂದಿರ ದಿನ** | ತಾಯಿ ಮತ್ತು ಮಗುವಿನ ಪೋಷಣೆ, ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಜಾಗೃತಿ. | ಅರಿವು ಕಾರ್ಯಕ್ರಮ.<br>ಗರ್ಭಿಣಿ ಮಹಿಳೆಯರಿಗೆ ತಾಯಿ ಕಾರ್ಡ್ ಖಾತರಿ ಪಡಿಸಿಕೊಳ್ಳುವುದು.<br>ಅಪೌಷ್ಟಿಕತೆಯ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಪೌಷ್ಟಿಕ ಆಹಾರ ದೊರೆಯುವಂತೆ ನೋಡಿಕೊಳ್ಳುವುದು. |
| 10 ನೇ ವಾರ (10 ರಿಂದ 16 ಮೇ 2023) | **10ನೇ ಮೇ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ** | ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ತಿಳಿಯಪಡಿಸುವುದು. | 10-05-2021ರಂದು ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟದ ಕುರಿತು ಸ್ಮರಣೆಗಾಗಿ ವಿಶೇಷ ಕಾರ್ಯಕ್ರಮ ಆಯೋಜಿಸುವುದು. |
| | **ಸಾಮಾಜಿಕ ಲೆಕ್ಕಪರಿಶೋಧನೆ**<br>**(ಜಮಾಬಂಧಿ)** | ಗ್ರಾಮ ಪಂಚಾಯತಿ ಮತ್ತು ಬಜೆಟ್ ಹೊಣೆಗಾರಿಕೆ ಮತ್ತು ಕೆಲಸದ ಪ್ರಗತಿಯನ್ನು ತೆಗೆದುಕೊಳ್ಳುವುದು. | ಉಪನ್ಯಾಸ ಮತ್ತು ಜಾಗೃತಿ ಕಾರ್ಯಕ್ರಮ ನಡೆಸುವುದು. |
| 11 ನೇ ವಾರ (17 ರಿಂದ 23 ಮೇ 2023) | **ಮಹಿಳೆಯರಲ್ಲಿ ವೈಜ್ಞಾನಿಕ ಮನೋಭಾವನೆ** | ವೈಜ್ಞಾನಿಕ ಅರಿವು ಮತ್ತು ಮೂಡನಂಬಿಕೆಗಳ ನಿವಾರಣೆ. | ನಮ್ಮ ದೈನಂದಿನ ಜೀವನದಲ್ಲಿ ವಿಜ್ಞಾನದ ಮೌಲ್ಯವನ್ನು ತಿಳಿಯಲು ಉತ್ತೇಜಿಸುವುದು. ಜಿಲ್ಲೆಯಲ್ಲಿನ ಭಾರತ ಜ್ಞಾನ ವಿಜ್ಞಾನ ಸಮಿತಿಗಳ ಸಹಯೋಗದಲ್ಲಿ ವಿಜ್ಞಾನ ಅರಿವು, ಪವಾಡ ಬಯಲು ಕಾರ್ಯಕ್ರಮಗಳನ್ನು ಆಯೋಜಿಸುವುದು. |
| | **22 ನೇ ಮೇ: ಅಂತರಾಷ್ಟ್ರೀಯ ಜೈವಿಕ ದಿನ** | ಜೈವಿಕ ಮಹತ್ವ ಮತ್ತು ಸಂರಕ್ಷಣೆ.<br>ಕೈ ತೋಟ/ ಕಿಚನ್ ಗಾರ್ಡನ್ | ಕೈ ತೋಟ ಬೆಳೆಯಲು, ಸಸಿ ನೆಡಲು ಪ್ರೋತ್ಸಹಿಸುವುದು. ಜೈವಿಕ ವಿಷಯಗಳ ಬಗ್ಗೆ ತಿಳಿಸುವುದು.<br>ಸ್ವ ಸಹಾಯ ಸಂಘಗಳಲ್ಲಿ ಗುಂಪು ಚರ್ಚೆ. |

| | | | |
|---|---|---|---|
| 12 ನೇ ವಾರ<br>(24 ರಿಂದ 30 ಮೇ 2023) | **ನೀರು,ನೈರ್ಮಲ್ಯ ಮತ್ತು ಶುಚಿತ್ವ** | ಸ್ನೇಹ ಕ್ಲಿನಿಕ್‌ನ ಸೌಲಭ್ಯಗಳ ಬಳಕೆ, ಋತು ಚಕ್ರದ ಶುಚಿತ್ವ ಹಾಗೂ ನಿರ್ವಹಣೆ | ಉಪನ್ಯಾಸ ಮತ್ತು ಜಾಗೃತಿ ಕಾರ್ಯಕ್ರಮ ಆಯೋಜನೆ ಸ್ವಯಂ ಸೇವಾ ಸಂಸ್ಥೆಗಳ ಜೊತೆಯಲ್ಲಿ. |
| **ಜೂನ್ 2023** | **ವಿಶೇಷ ದಿನಗಳು** | **ಅಳವಡಿಸಿಕೊಳ್ಳಬೇಕಾದ ವಿಷಯಗಳು** | **ಕಾರ್ಯಕ್ರಮ/ಚಟುವಟಿಕೆಗಳು** |
| 13ನೇ ವಾರ<br>(31 ಮೇ ರಿಂದ 06ಜೂನ್ 2023) | **05ನೇ ಜೂನ್<br>ವಿಶ್ವ ಪರಿಸರ ದಿನ** | ಪರಿಸರ ಸಂರಕ್ಷಣೆ | ಪರಿಸರ ಮಹತ್ವ ಕುರಿತು ಉಪನ್ಯಾಸ ಕಾರ್ಯಕ್ರಮ<br>ಜಾಥಾ ಕಾರ್ಯಕ್ರಮ<br>ಶಾಲಾ ಕಾಲೇಜುಗಳಲ್ಲಿ ಪರಿಸರದ ಕುರಿತು ಚಿತ್ರಕಲೆ ಕಾರ್ಯಕ್ರಮ<br>ಸಸಿ ನೆಡುವ ಕಾರ್ಯಕ್ರಮಗಳು |
| 14ನೇ ವಾರ<br>(07 ರಿಂದ 13 ಜೂನ್ 2023) | **12ನೇ ಜೂನ್<br>ಬಾಲಕಾರ್ಮಿಕತೆ ಮುಕ್ತ ದಿನ** | ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆಯಿಂದ ಮುಕ್ತತೆ ( ಬಾಲಕಾರ್ಮಿಕತೆಯಿಂದ ಮುಕ್ತತೆ) | ತಿದ್ದುಪಡಿ ಮಾಡಲಾದ ಬಾಲಕಾರ್ಮಿಕತೆ ಕಾಯಿದೆ ಕುರಿತು ಅರಿವು ಮೂಡಿಸುವುದು.<br><br>ಶಾಲೆಯಿಂದ ಹೊರಗುಳಿದ ಮತ್ತು ದುಡಿಮೆಯಲ್ಲಿರುವ ಮಕ್ಕಳ ಸಮೀಕ್ಷೆಯಲ್ಲಿ ಗುರುತಿಸಲಾದ ಮಕ್ಕಳನ್ನು ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯ ಮೂಲಕ ಅಗತ್ಯ ಕ್ರಮ ಕೈಗೊಂಡು ಶಿಕ್ಷಣದ ಮುಖ್ಯವಾಹಿನಿಗೆ ಸೇರಿಸುವುದು.<br><br>ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆ ಕಾಯಿದೆ ಅಡಿಯಲ್ಲಿ ನಿರೀಕ್ಷರಾಗಿ ನಿಯೋಜಿಸಲಾದ ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಅಂಗಡಿಗಳು, ಹೋಟೆಲ್‌ಗಳು, ಕಾರ್ಖಾನೆಗಳು ಸೇರಿದಂತೆ ವಿವಿಧ ಸಂಸ್ಥೆಗಳ ತಪಾಷಣೆ ನಡೆಸಿ, ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆಯ ಕಾರ್ಮಿಕರನ್ನು ನೇಮಿಸಿಕೊಂಡವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು.<br><br>ಬಾಲಕಾರ್ಮಿಕತೆ ಮುಕ್ತ ಗ್ರಾಮ ಪಂಚಾಯತಿ ಎಂದು ಘೋಷಿಸಲು ಕ್ರಮ ಕೈಗೊಳ್ಳುವುದು. |
| 15ನೇ ವಾರ<br>(14 ರಿಂದ 20ಜೂನ್ 2023) | **14ನೇ ಜೂನ್<br>ವಿಶ್ವ ರಕ್ತ ದಾನ ದಿನ** | ರಕ್ತದಾನದ ಮಹತ್ವ ಕುರಿತು. | ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸ್ವಯಂ ಸೇವಾ |

| | | | |
|---|---|---|---|
| | | | ಸಂಸ್ಥೆಗಳ ಸಹಯೋಗದಲ್ಲಿ ರಕ್ತ ದಾನ ಶಿಭಿರ ಆಯೋಜಿಸುವುದು. |
| | **15ನೇ ಜೂನ್ ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ** | ಹಿರಿಯರ ನಿಂದನೆ ಆಗದಂತೆ ಕುರಿತು. | ಸ್ಥಳೀಯ ಹಿರಿಯರ ಆರೈಕೆ ಹಾಗೂ ಅವರನ್ನು ನಿಂದಿಸದಂತೆ ಜಾಗ್ರುತಿ ಕಾರ್ಯಕ್ರಮ ಆಯೋಜಿಸುವುದು. |
| | **17ನೇ ಜೂನ್ ವಿಶ್ವ ಮರು ಭೂಮಿಕರಣ ಮತ್ತು ಬರಗಾಲ ತಡೆ ದಿನ** | ಭೂಮಿಯ ಫಲವತ್ತತೆ ಕಾಪಾಡುವುದು ಮತ್ತು ಹೆಚ್ಚಿಸುವುದು | ಭೂಮಿಯ ಫಲವತ್ತತೆಯ ಮಹತ್ವ ಕುರಿತು, ಮರುಭೂಮಿ ಆಗದಂತೆ ಹಾಗೂ ಬರಗಾಲವನ್ನು ತಡೆಗಟ್ಟುವ ಕುರಿತು ಜಾಗೃತಿ ಮೂಡಿಸುವುದು. ಜೈವಿಕ ತಂತ್ರ ಜ್ಞಾನ ಬಳಕೆ, ಜೈವಿಕ ಕೃಷಿಗೆ ಪ್ರೋತ್ಸಾಹ. |
| 16ನೇ ವಾರ (21 ರಿಂದ 27 ಮತ್ತು 28 ರಿಂದ 30 ಜೂನ್ 2023) | **21ನೇ ಜೂನ್ ವಿಶ್ವ ಯೋಗ ದಿನ** | ಯೋಗದ ಮಹತ್ವ ಕುರಿತು | ಯೋಗದಿಂದ ಆಗುವ ಉಪಯೋಗ ಕುರಿತು ಉಪನ್ಯಾಸ ಮತ್ತು ಮಹಿಳೆಯರಿಗೆ, ಹದಿಹರೆಯದವರಿಗೆ ಯೋಗ ಶಿಭಿರಗಳನ್ನು ಆಯೋಜಿಸುವುದು. |
| | **23ನೇ ಜೂನ್ ವಿಶ್ವ ವಿಧವೆಯರ ದಿನ** | ವಿಧವೆಯರ ವಿರುದ್ಧದ ಕಳಂಕ ತಾರತಮ್ಯ ನಿಷೇಧ | ಸಮುದಾಯದಲ್ಲಿ ವಿಧವೆಯರ ಬಗ್ಗೆ ಇರುವ ಕಳಂಕ ತಾರಮ್ಯವನ್ನು ಸಂಪೂರ್ಣವಾಗಿ ನಿಷೇಧಿಸಲು ಹಾಗೂ ಅವರ ಜೀವನಕ್ಕೆ ಪೂರಕ ವಾತಾವರಣ ಕಲ್ಪಿಸುವುದು. ವಿಧವಾ ಪಿಂಚಣಿ ಕೊಡಿಸುವುದು. |
| | **26ನೇ ಜೂನ್ ಮಾಧಕ ವಸ್ತು ಮತ್ತು ಅಕ್ರಮ ಕಳ್ಳ ಸಾಗಾಣಿಕೆ ವಿರುದ್ಧದ ಅಂತರಾಷ್ಟ್ರೀಯ ದಿನ ಹಾಗೂ ಚಿತ್ರ ಹಿಂಸೆಗೊಳಗಾದವರಿಗೆ ಬೆಂಬಲಿಸುವ ದಿನ** | ಮಾಧಕ ವಸ್ತು ಮತ್ತು ಅಕ್ರಮ ಕಳ್ಳ ಸಾಗಾಣಿಕೆ ತಡೆಗಟ್ಟುವುದು.<br>ಚಿತ್ರ ಹಿಂಸೆಗೊಳಗಾದವರಿಗೆ ಬೆಂಬಲ | ವಿವಿಧ ಚಟುವಟಿಕೆಗಳ ಮೂಲಕ ಮಾಧಕ ವಸ್ತು ಮತ್ತು ಅಕ್ರಮ ಕಳ್ಳ ಸಾಗಾಣಿಕೆ ಕುರಿತು ಜಾಗೃತಿ ಮತ್ತು ಜಾಥಾ ಕಾರ್ಯಕ್ರಮಗಳನ್ನು ಆಯೋಜಿಸುವುದು.<br>ಬಿತ್ತಿಚಿತ್ರಗಳ ಪ್ರದರ್ಶನ.<br><br>ಚಿತ್ರ ಹಿಂಸೆಗೊಳಗಾದವರನ್ನು ಗುರುತಿಸಿ ಅವರಿಗೆ ಅಗತ್ಯ ಆರೈಕೆ ಬೆಂಬಲ ಮತ್ತು ಸರ್ಕಾರಿ ಯೋಜನೆಯ ಪ್ರಯೋಜನೆ ದೊರೆಯುವಂತೆ ಮಾಡುವುದು. |

****ಮಹಿಳೆಯರಿಗೆ ಕಾನೂನು ಅರಿವು ಕಾರ್ಯಕ್ರಮಗಳು:** ಸ್ಥಳೀಯ ಸಂಪನ್ಮೂಲ ವ್ಯಕ್ತಿ ಅಥವಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ಈ ಕೆಳಕಂಡ ಕಾನೂನು/ವಿಷಯಗಳ ಕುರಿತು ಮಹಿಳೆಯರಿಗೆ ಅರಿವು ಮೂಡಿಸುವುದು.

**1.**ಮಹಿಳಾ ಸಹಾಯವಾಣಿ-1091

**2.** ಸಂವಿಧಾನಿಕ ಹಕ್ಕುಗಳು ಮತ್ತು ಕರ್ತವ್ಯಗಳು

**3.** ಮಹಿಳಾ ಆಯೋಗ

**4.** ಮಾನವ ಸಾಗಾಣಿಕೆ ತಡೆ ಕಾಯ್ದೆ

**5**. ಬಾಲ್ಯ ವಿವಾಹ ನಿಷೇಧ ಕಾಯ್ದೆ
**6**. ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ತಿದ್ದುಪಡಿಯಂತೆ
**7**. ಭ್ರೂಣ ಲಿಂಗಪತ್ತೆ ಮತ್ತು ಭ್ರೂಣಹತ್ಯೆ ನಿಷೇಧ ಕಾಯ್ದೆ
**8**. ವರದಕ್ಷಿಣೆ ನಿಷೇಧ ಕಾಯ್ದೆ
**9**. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ
**10**. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆ
**11**. ವಿಶೇಷ ವಿವಾಹ ಕಾಯ್ದೆ
**12**. ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು ಕಾಯ್ದೆ
**13**. ಮಹಿಳಾ ಮೀಸಲಾತಿ ಕಾಯ್ದೆ (ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲಿ)
**14**. ಕನಿಷ್ಟ ವೇತನ ಕಾಯ್ದೆ, ಸಮಾನ ಕೆಲಸಕ್ಕೆ ಸಮಾನ ವೇತನ ಕಾಯ್ದೆ
**15**. ದೇವದಾಸಿ ಪದ್ಧತಿ ನಿಷೇಧ ಕಾಯ್ದೆ
**16**. ಜೀತ ಪದ್ಧತಿ ನಿಷೇಧ ಕಾಯ್ದೆ
**17**. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ
**18**.ಮಕ್ಕಳ ಹಕ್ಕುಗಳು-ಬಾಲ ನ್ಯಾಯ ಕಾಯ್ದೆ
**19**. ವಿಶೇಷ ಚೇತನರ ಹಕ್ಕುಗಳ ಅಧಿನಿಯಮ.

## ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ 2023

## ಅನುಬಂಧ-ಬಿ

### ಗ್ರಾಮದ ಮಹಿಳೆಯರ ಅಂಕಿ ಅಂಶಗಳ ವರದಿ

**ಜಿಲ್ಲೆ:** **ತಾಲ್ಲೂಕು:** **ಗ್ರಾಮ ಪಂಚಾಯತಿ:** **ಗ್ರಾಮದ ಹೆಸರು:**

**ವಿ.ಸೂ**.: ಗ್ರಾಮ ಪಂಚಾಯತಿಯು ಸ್ಥಳೀಯ ಅಧಿಕಾರಿಗಳ, ಅಧಿಕಾರೇತರರ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಈ ಕೆಳಗಿನ ವಿಷಯಗಳ ಕುರಿತು ಅಂಕಿ ಅಂಶಗಳ ವರದಿಯನ್ನು ಗ್ರಾಮವಾರು ಸಿದ್ಧಪಡಿಸಿ ಆಯಾ ಗ್ರಾಮದ ಮಹಿಳಾ ಗ್ರಾಮ ಸಭೆಯಲ್ಲಿ ಚರ್ಚೆಗೆ ಮಂಡಿಸುವುದು.

1. **ಆರೋಗ್ಯದ ವಿಷಯಗಳು**:

| **ವಿಷಯಗಳು** | **ವಿವರಗಳು** | **ಸಂಖ್ಯೆ/ಶೇಕಡ/** |
|---|---|---|
| ಮಕ್ಕಳ ಅಪೌಷ್ಟಿಕತೆ | ಬಾಲಕಿಯರು | |
| | ಬಾಲಕರು | |
| ಮಹಿಳೆಯರ ಅಪೌಷ್ಟಿಕತೆ | ಅವಿವಾಹಿತ ಮಹಿಳೆಯರು | |
| | ವಿವಾಹಿತ ಮಹಿಳೆಯರು | |
| ರಕ್ತ ಹೀನತೆಗೊಳಗಾದವರ ಸಂಖ್ಯೆ | 18 ವರ್ಷದೊಳಗಿನ ಮಕ್ಕಳು | |
| | 18 ವರ್ಷ ಮೇಲ್ಪಟ್ಟ ಮಹಿಳೆಯರು | |
| ಸಾಂಸ್ಥಿಕ ಹೆರಿಗೆಗಳ ಸಂಖ್ಯೆ | | |
| ತಾಯಂದಿರ ಮರಣ ಸಂಖ್ಯೆ | | |
| ಶಿಶು ಮರಣ ಸಂಖ್ಯೆ | ಗಂಡು ಮಕ್ಕಳು | |
| | ಹೆಣ್ಣು ಮಕ್ಕಳು | |
| ಮಕ್ಕಳ ಮರಣ ಸಂಖ್ಯೆ | ಗಂಡು ಮಕ್ಕಳು | |
| | ಹೆಣ್ಣು ಮಕ್ಕಳು | |
| ಸಾಂಕ್ರಾಮಿಕ ರೋಗಗಳು | 1. | |
| | 2. | |
| | 3. | |
| | 4. | |
| ಸಾಂಕ್ರಾಮಿಕ ರೋಗಗಳು | 1. | |
| | 2. | |
| | 3. | |
| | 4. | |
| ಪೋಲಿಯೋ ಪ್ರಕರಣಗಳು ವರದಿಯಾಗಿವೆಯೇ (ಕಳೆದ 05 ವರ್ಷಗಳಿಂದ) | | |

| | | |
|---|---|---|
| ಒಟ್ಟು ವಿಶೇಷ ಚೇತನರು (ಹುಟ್ಟಿನಿಂದ) | 18 ವರ್ಷದೊಳಗಿನ ಗಂಡು ಮಕ್ಕಳು | |
| | 18 ವರ್ಷದೊಳಗಿನ ಹೆಣ್ಣು ಮಕ್ಕಳು | |
| | ಮಹಿಳೆಯರು | |
| ಅಪಘಾತಗಳಿಂದ ವಿಶೇಷ ಚೇತನರು | 18 ವರ್ಷದೊಳಗಿನ ಗಂಡು ಮಕ್ಕಳು | |
| | 18 ವರ್ಷದೊಳಗಿನ ಹೆಣ್ಣು ಮಕ್ಕಳು | |
| | ಮಹಿಳೆಯರು | |

**2. ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು**:

| ವಿಷಯ | ವಿವರ |
|---|---|
| ಮಹಿಳೆಯರ ಸಾಕ್ಷರತೆ ಪ್ರಮಾಣ | |
| ಸರ್ವಶಿಕ್ಷಣ ಅಭಿಯಾನದಡಿ ಬಾಲಕಿಯರ ಸಾರ್ವತ್ರಿಕ ದಾಖಲಾತಿ ವಿವರ | |
| ಶಾಲೆಯಿಂದ ಹೊರಗುಳಿದ 06 ರಿಂದ 14 ವರ್ಷದ ಹೆಣ್ಣು ಮಕ್ಕಳ ಸಂಖ್ಯೆ | |
| ಶಾಲೆಯಿಂದ ಹೊರಗುಳಿದ 15 ರಿಂದ 18 ವರ್ಷದ ಹೆಣ್ಣು ಮಕ್ಕಳ ಸಂಖ್ಯೆ | |
| ಕಾಲೇಜು ಮತ್ತು ಪದವಿ ಶಿಕ್ಷಣ ಪಡೆದ ಹೆಣ್ಣು ಮಕ್ಕಳ ಸಂಖ್ಯೆ | |
| ಉನ್ನತ ಶಿಕ್ಷಣ ಪಡೆದುಕೊಂಡಿರುವ ಮಹಿಳೆಯರ ಸಂಖ್ಯೆ | |
| ತಾಂತ್ರಿಕ ಶಿಕ್ಷಣ ಪಡೆದುಕೊಂಡಿರುವ ಮಹಿಳೆಯರ ಸಂಖ್ಯೆ | |
| ವೃತ್ತಿಪರ ಶಿಕ್ಷಣ ಪಡೆದುಕೊಂಡಿರುವ ಮಹಿಳೆಯರ ಸಂಖ್ಯೆ | |
| ಶಾಲೆಗಳಲ್ಲಿ ಶೌಚಾಲಯಗಳು ಹಾಗೂ ನೀರಿನ ಲಭ್ಯತೆ ಮತ್ತು ಬಳಕೆ ಇದೆಯೇ? | |
| ಶಾಲೆಗಳಲ್ಲಿ ಬಾಲಕ ಮತ್ತು ಬಾಲಕಿಯರಿಗಾಗಿ ಪ್ರತ್ಯೇಕ ಶೌಚಾಲಯ ಲಭ್ಯತೆ | |
| ವಿಶೇಷ ಚೇತನ ಸ್ನೇಹಿ ಶೌಚಾಲಯ ಸೌಲಭ್ಯ/ವ್ಯವಸ್ಥೆ ಇದೆಯೇ? | |

| | |
|---|---|
| ಕಿಶೋರಿಯರಿಗೆ ಪ್ರತ್ಯೇಕ ಕೋಣೆಯ ವ್ಯವಸ್ಥೆ (ಸ್ವಚ್ಛತಾ ಕಿಟ್ ಬಳಕೆಗೆ) | |
| ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ | |
| ಶಾಲೆಯಲ್ಲಿ ಆಟದ ಮೈದಾನ | |
| ಶಾಲೆಯಲ್ಲಿ ಗಣಕ ಯಂತ್ರಗಳ ಸೌಲಭ್ಯ | |
| ವಿಜ್ಞಾನ ಪ್ರಯೋಗಾಲಯ, ಶಾಲಾ ಗ್ರಂಥಾಲಯ | |
| ಎಸ್.ಎಸ್.ಎಲ್.ಸಿ.ಯಲ್ಲಿ ಪಾಸಾದ ಹೆಣ್ಣುಮಕ್ಕಳ ಶೇಕಡವಾರು ಪ್ರಮಾಣ | |
| ವಿಶೇಷ ಚೇತನ ಮಕ್ಕಳಿಗೆ ಶಾಲೆಯಲ್ಲಿ ವಿಶೇಷ ಶಿಕ್ಷಣ ಸೌಲಭ್ಯ | |
| ವಿಶೇಷ ಚೇತನ ಮಕ್ಕಳು ಪಡೆಯತ್ತಿರುವ ಸೌಲಭ್ಯಗಳು | |
| ಸರ್ಕಾರಿ ಸೌಲಭ್ಯಗಳಿಗೆ ಅರ್ಹರಿರುವ ವಿಶೇಷ ಚೇತನ ಮಕ್ಕಳು | |
| ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಯಲ್ಲಿನ ಮಹಿಳೆಯರ ಸಂಖ್ಯೆ | |
| ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ ಸಂಖ್ಯೆ | |
| ಗ್ರಾಮದಲ್ಲಿ ಸಾರ್ವಜನಿಕ ಆಟದ ಮೈದಾನದ ಲಭ್ಯತೆ | |
| ಗ್ರಾಮ ಪಂಚಾಯಿತಿ ಗ್ರಂಥಾಲಯ/ಗಳು | |
| ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ನೊಂದಣಿಯಾದ ಮಹಿಳೆಯರ ಸಂಖ್ಯೆ | |
| ಗ್ರಾಮ ಪಂಚಾಯಿತಿ ಗ್ರಂಥಾಲಯದ ಪ್ರಯೋಜನ ಪಡೆಯುತ್ತಿರುವ ಮಹಿಳೆಯರ ಸಂಖ್ಯೆ | |
| ಹವ್ಯಾಸಿ ಮಹಿಳಾ ಕಲಾತಂಡ/ಗಳು | |
| ಸಾಂಪ್ರದಾಯಿಕ ಕಲೆಗಳ ಸಂರಕ್ಷಣೆಯಲ್ಲಿ ಮಹಿಳೆಯರು | |
| ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಕಲಿಯುತ್ತಿರುವ ಮಹಿಳೆಯರು | |
| ಶಿಕ್ಷಣ ಕ್ಷೇತ್ರ ಮತ್ತು ಇತರೆ ಕ್ಷೇತ್ರದಲ್ಲಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಗ್ರಾಮದ ಮಹಿಳೆಯರು | |

**3.ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸಂಬಂಧಿಸಿದ ವಿಷಯಗಳು:**

| ವಿಷಯ | ವಿವರ |
|---|---|
| ಮಹಿಳಾ ಮುಖ್ಯಸ್ಥರನ್ನು ಹೊಂದಿರುವ ಕುಟುಂಬಗಳ ಸಂಖ್ಯೆ | |

| | |
|---|---|
| ನರೇಗಾ ಯೋಜನೆಯಡಿ ಕೆಲಸದ ಚೀಟಿಗಳನ್ನು ಹೊಂದಿರುವ ಮಹಿಳೆಯರ ಸಂಖ್ಯೆ | |
| ಕೃಷಿ ಜಮೀನಿನ ಹೊಡೆತನ ಹೊಂದಿರುವ ಮಹಿಳೆಯರ ಸಂಖ್ಯೆ | |
| ಮಹಿಳಾ ಕೃಷಿಕರ ಸಂಖ್ಯೆ | |
| ಮಹಿಳಾ ಕೂಲಿ ಕಾರ್ಮಿಕರ ಸಂಖ್ಯೆ | |
| ಕೃಷಿ ಕಾರ್ಮಿಕ ಮಹಿಳೆಯರು ಸಂಖ್ಯೆ | |
| ಕಟ್ಟಡ ಕಾರ್ಮಿಕ ಮಹಿಳೆಯರು ಸಂಖ್ಯೆ ಗ್ರಾಮದಲ್ಲಿ ವಾಸವಿದ್ದು ಮಾಸಿಕ ನಿರ್ಧಿಷ್ಟ ಆದಾಯ ನೀಡುವ ಉದ್ಯೋಗಕ್ಕಾಗಿ ಗ್ರಾಮದಿಂದ ಹೊರಗೆ ಹೋಗುವ ಮಹಿಳೆಯರು | |
| ಗ್ರಾಮದಲ್ಲಿರುವ ಒಟ್ಟು ಸ್ವಸಹಾಯ ಸಂಘಗಳು | |
| ಗ್ರಾಮದಲ್ಲಿರುವ ಸ್ವಸಹಾಯ ಸಂಘಗಳಲ್ಲಿರುವ ಒಟ್ಟು ಮಹಿಳೆಯರು | |
| ಜೀವನೋಪಾಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ | |
| ಹೈನುಗಾರಿಕೆ | |
| ಆಹಾರೋತ್ಪನ್ನ ಚಟುವಟಿಕೆ | |
| ಹೊಲಿಗೆ ಯಂತ್ರ | |
| ಅಗರಬತ್ತಿ ತಯಾರಿಕೆ | |
| ಆಟೋರಿಕ್ಷಾ | |
| ಬ್ಯೂಟಿಷಿಯನ್ ಕೋರ್ಸ್ | |
| ಕಂಪ್ಯೂಟರ್ ತರಬೇತಿ | |
| ಸಾವಯವ ಬೇಸಾಯ ಮತ್ತು ಸಿರಿಧಾನ್ಯಗಳ ವ್ಯವಸಾಯ | |
| ತ್ಯಾಜ್ಯ ನಿರ್ವಹಣಾ ಘಟಕ ನಿರ್ವಹಣೆ | |
| ಇತರೆ ಕೆಲಸಗಳು(ವಿವರಿಸಿ) | |
| ಸ್ಥಳೀಯ ಸಹಕಾರಿ ಸಂಘಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ | |
| ಹಾಲು ಉತ್ಪಾದಕರ ಸಹಕಾರ ಸಂಘ | |
| ಕೃಷಿ ಪತ್ತಿನ ಸಹಕಾರ ಸಂಘ | |
| ಮಹಿಳಾ ಬ್ಯಾಂಕ್ | |
| ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಫಲಾನುಭಿವಗಳ ವಿವರ. | 1. ಮನಸ್ವಿನಿ _________ ಸಂಖ್ಯೆ<br>2. ವಿಧವಾ ವೇತನ ___________ ಸಂಖ್ಯೆ<br>3. ವಿಕಲ ಚೇತನರು ____________ಸಂಖ್ಯೆ<br>4. ತೃತೀಯ ಲಿಂಗಿಗಳು __________ ಸಂಖ್ಯೆ<br>ವೃದ್ಧರು (ವೃದ್ಯಾಪ್ಯ ವೇತನ) ________ಸಂಖ್ಯೆ |

**4. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಫಲಾನುಭವಿಗಳ ವಿವರ**

| ವಿಷಯ | ವಿವರ |
|---|---|
| ಬಾಲ್ಯ ಹಾಗೂ ಕಿಶೋರ ಕಾರ್ಮಿಕರ ಸಂಖ್ಯೆ (ಬಾಲ ಕಾರ್ಮಿಕತೆ) | |
| ಬಾಲ್ಯ ವಿವಾಹಗಳ ಸಂಖ್ಯೆ | |
| ಜೀತಪದ್ದತಿಯಲ್ಲಿರುವ ಬಾಲಕಿಯರ ಮತ್ತು ಮಹಿಳೆಯರ ಸಂಖ್ಯೆ | |
| ವರದಕ್ಷಿಣೆ ಕಿರುಕುಳಗಳ ಸಂಖ್ಯೆ<br>ವರದಕ್ಷಿಣೆ ಸಾವುಗಳ ಸಂಖ್ಯೆ | |
| ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರ ಸಂಖ್ಯೆ | |
| ಕೌಟುಂಬಿಕ ದೌರ್ಜನ್ಯದಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | |
| ಪ್ರಸಕ್ತ ವರ್ಷದಲ್ಲಿ ದೇವದಾಸಿಯರನ್ನಾಗಿಸಿದ ಮಹಿಳೆಯರ ಸಂಖ್ಯೆ | |
| ಇತರೆ | |

**ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ 2023**

**ಅನುಬಂಧ-ಸಿ**

**ಮಹಿಳೆಯರ ಬೇಡಿಕೆ/ಸಮಸ್ಯೆ/ಪ್ರಶ್ನೆಗಳನ್ನು ಬರೆಯಲು ಕೋರಿಕೆ ಪತ್ರ:**

**ಗ್ರಾಮ ಪಂಚಾಯಿತಿಯ ಹೆಸರು:**______________________

**ಗ್ರಾಮದ ಹೆಸರು:** ________________ **ತಾಲ್ಲೂಕು :**___________ **ಜಿಲ್ಲೆ:**_____________________

**ನಿಮ್ಮ ಹೆಸರು (ನಿಮಗೆ ಇಷ್ಟವಿದ್ದರೆ ಮಾತ್ರ ಬರೆಯಿರಿ):** ______________________

**ನಿಮ್ಮ ವಿಳಾಸ (ನಿಮಗೆ ಇಷ್ಟವಿದ್ದರೆ ಮಾತ್ರ):** ________________________________________

**ನಿಮ್ಮ ಕೋರಿಕೆ/ಸಮಸ್ಯೆ/ಪ್ರಶ್ನೆ (ಪತ್ರದ ಹಿಂಬದಿಯಲ್ಲೂ ಬರೆಯಬಹುದು):**

______________________________________________________________________________

______________________________________________________________________________

___________________________________________________________________________.

**ಸಮಸ್ಯೆಯು ನಿಮ್ಮ ಪ್ರವೇಶದ ಮೂಲ ಸೌಕರ್ಯಕ್ಕೆ ಸಂಬಂಧಿಸಿದ್ದಾಗಿದ್ದಲ್ಲಿ ನಿಮ್ಮ ಸರಿಯಾದ ವಿಳಾಸ ಮತ್ತು ಸ್ಥಳದ ವಿವರಗಳನ್ನು ನೀಡುವುದನ್ನು ಖಚಿತಪಡಿಸಿಕೊಳ್ಳಿ.**

**ದಿನಾಂಕ:**_________ _ ____ **ನಿಮ್ಮ ಸಹಿ:** __________

## ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ 2023

## ನಮೂನೆ-1

## ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ - ಕಾರ್ಯಚಟುವಟಿಕೆಗಳ ತಾತ್ಕಾಲಿಕ ವೇಳಾಪಟ್ಟಿ

**ವಿಶೇಷ ಸೂಚನೆ:** ಪೂರ್ವ ಸಿದ್ಧತಾ ಸಭೆಯಲ್ಲಿ ಯೋಜಿಸಲಾದ ಕಾರ್ಯಕ್ರಮ/ಚಟುವಟಿಕೆಗಳ ವಿವರ ಮತ್ತು ತಾತ್ಕಾಲಿಕ ದಿನಾಂಕವನ್ನು ನಮೂದಿಸುವುದು.

ಕಾರ್ಯಕ್ರಮ/ಚಟುವಟಿಕೆಗಳ ಅನುಷ್ಠಾನದ ನಂತರ ಕಾಲಂ 4,5,6,7,8 ರಲ್ಲಿ ವಿವರಗಳನ್ನು ನಮೂದಿಸುವುದು.

**(ಈ ನಮೂನೆಯಲ್ಲಿನ ವಿವರಗಳನ್ನು ಪಂಚತಂತ್ರದಲ್ಲಿ ಅಪ್‌ಡೇಟ್ ಮಾಡುವುದು)**

ಜಿಲ್ಲೆಯ ಹೆಸರು: ತಾಲ್ಲೂಕು ಪಂಚಾಯತಿ ಹೆಸರು: ಗ್ರಾಮ ಪಂಚಾಯತಿ ಹೆಸರು:

| ಕ್ರಮ ಸಂಖ್ಯೆ | ಕಾರ್ಯಚಟುವಟಿಕೆಗಳ ತಾತ್ಕಾಲಿಕ ವೇಳಾಪಟ್ಟಿ | | ಕಾರ್ಯಚಟುವಟಿಕೆಗಳ ಅನುಷ್ಠಾನದ ವರದಿ | | | | | ಷರಾ |
|---|---|---|---|---|---|---|---|---|
| | | | ಕಾರ್ಯಚಟುವಟಿಕೆ ನಡೆಸಿದ ದಿನಾಂಕ | ಕಾರ್ಯಚಟುವಟಿಕೆಯಲ್ಲಿ ಭಾಗವಹಿಸಿದವರ ಸಂಖ್ಯೆ | | | ಕಾರ್ಯ ಚಟುವಟಿಕೆಯ ಫೋಟೋ | |
| | ಕಾರ್ಯಚಟುವಟಿಕೆಯ ಹೆಸರು | ತಾತ್ಕಾಲಿಕವಾಗಿ ನಿಗದಿಪಡಿಸಲಾದ ದಿನಾಂಕ | | ಕಿಶೋರಿಯರು | ಮಹಿಳೆಯರು | ಒಟ್ಟು | | |
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |
| | | | | | | | | |

**ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ 2023**

**ನಮೂನೆ-2**

**ಮಹಿಳೆಯರ ವಾರ್ಡ್ ಸಭೆ**

**ಸಭಾ ನಡಾವಳಿ ಮತ್ತು ಮಹಿಳೆಯರ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಪಟ್ಟಿ**

**ಸಭಾ ನಡಾವಳಿ:**

ಜಿಲ್ಲೆ : ತಾಲ್ಲೂಕು: ಗ್ರಾಮ ಪಂಚಾಯತಿ ಹೆಸರು

ಗ್ರಾಮದ ಹೆಸರು: ವಾರ್ಡ್ ಸಭೆ ನಡೆಸಲಾದ ಸ್ಥಳ: ದಿನಾಂಕ:

ಸಭೆಯಲ್ಲಿ ಹಾಜರಿದ್ದವರು:

| ಕ್ರಮ ಸಂಖ್ಯೆ | ಕ್ರಮ ಸಂಖ್ಯೆ ಹೆಸರು ( ಅಧಿಕಾರಿಗಳು, ಅಧಿಕಾರೇತರರು) | ಲಿಂಗ | ವಯಸ್ಸು | ಶಿಕ್ಷಣ ಮಟ್ಟ | ಮಾಡುತ್ತಿರುವ ಕೆಲಸ/ಹುದ್ದೆ/ ಇಲಾಖೆ/ ಸಂಸ್ಥೆಯ ಹೆಸರು (ಇಲಾಖೆ ಮತ್ತು ಇಲಾಖೇತರರ) | ದೂರವಾಣಿ/ ಮೋಬೈಲ್ ಸಂಖ್ಯೆ | ಸಹಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |
| | | | | | | | |
| | | | | | | | |
| | | | | | | | |

**ಮಹಿಳೆಯರ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಪಟ್ಟಿ:**

| ಕ್ರಮ ಸಂಖ್ಯೆ | ವಿಷಯ/ಸಮಸ್ಯೆ/ಬೇಡಿಕೆ/ಪ್ರಶ್ನೆ | *ವಿಷಯ/ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧಪಡುವ ಕ್ಷೇತ್ರ | ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಭೌಗೋಳಿಕ ಪ್ರದೇಶ/ಸ್ಥಳ | ಚರ್ಚಿಸಲಾದ ಅಂಶಗಳು-ಸಂಕ್ಷಿಪ್ತವಾಗಿ | ತೆಗೆದುಕೊಳ್ಳಲಾದ ನಿರ್ಣಯ/ಠರಾವು | ತೆಗೆದುಕೊಳ್ಳಲಾದ ನಿರ್ಣಯ/ಠರಾವು ಜಾರಿಗೊಳಿಸಬೇಕಾದ ಜವಬ್ದಾರಿ (ಇಲಾಖೆ ಮತ್ತು ಅಧಿಕಾರಿ) | ಜಾರಿಗೊಳಿಸಲು ನಿಗದಿಪಡಿಸಲಾದ ಕಾಲಾವದಿ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |

ಸೂಚನೆ: (1) ಮಹಿಳಾ ವಾರ್ಡ್ ಮಟ್ಟದ ಸಭೆಯ ನಡಾವಳಿಗಾಗಿಯೇ ಪ್ರತೀ ಗ್ರಾಮಕ್ಕೆ ಪ್ರತ್ಯೇಕ ಪುಸ್ತಕ ಇಡುವುದು ಹಾಗೂ ಸದರಿ ಪುಸ್ತಕದಲ್ಲಿ ಈ ನಮೂನೆಯಲ್ಲಿ ತಿಳಿಸಿರುವಂತೆ ದಾಖಲಿಸುವುದು. (ಈಗಾಗಲೆ ಪ್ರತ್ಯೇಕ ಪುಸ್ತಕ ನಿರ್ವಹಿಸುತ್ತಿದ್ದಲ್ಲಿ ಸದರಿ ಪುಸ್ತಕದಲ್ಲಿಯೇ ಮುಂದುವರಿಸುವುದು)

(2) ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಅಧಿಕಾರೇತರರ ವಿವರ ಮತ್ತು ಸಹಿ ಪಡೆಯುವುದು.

(3) ಮಹಿಳಾ ವಾರ್ಡ್ ಸಭೆಯಲಿ ಮೂಡಿಬಂದ ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಪಟ್ಟಿಯನ್ನು ನಮೂನೆಯಲ್ಲಿ ತಿಳಿಸಿರುವಂತೆ ದಾಖಲಿಸುವುದು.

* (ವಿಷಯ/ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಕ್ಷೇತ್ರದ ಕಾಲಂನಲ್ಲಿ -ಶಿಕ್ಷಣ, ಆರೋಗ್ಯ, ರಕ್ಷಣೆ, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ವಸತಿ, ಮಾನವ ಸಂಪನ್ಮೂಲ, ಇತ್ಯಾದಿ ನಮೂದಿಸುವುದು)

(4) ಗ್ರಾಮ ಪಂಚಾಯತಿ ಮಟ್ಟದ ಮಹಿಳಾ ಗ್ರಾಮ ಸಭೆಯಲ್ಲಿ ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಕುರಿತು ಚರ್ಚಿಸಿ, ಆದ್ಯತೀಕರಿಸಿ ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಪಟ್ಟಿಯನ್ನು ಅಂತಿಮಗೊಳಿಸುವುದು.

# ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ 2023

## ನಮೂನೆ-3
## ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಗ್ರಾಮ ಸಭೆ
## ಮಹಿಳೆಯರ ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಪಟ್ಟಿ.

ಜಿಲ್ಲೆ: ತಾಲ್ಲೂಕು: ಗ್ರಾಮ ಪಂಚಾಯಿತಿ:

ಯೋಜನೆ ತಯಾರಿಸಿದ ದಿನಾಂಕ:

| ಕ್ರಮ ಸಂಖ್ಯೆ | ವಿಷಯ/ಸಮಸ್ಯೆ/ ಬೇಡಿಕೆ/ಪ್ರಶ್ನೆ | *ವಿಷಯ/ಸಮಸ್ಯೆ/ ಬೇಡಿಕೆ/ಪ್ರಶ್ನೆ ಸಂಬಂಧಪಡುವ ಕ್ಷೇತ್ರ | ಸಮಸ್ಯೆ/ಬೇಡಿಕೆ/ ಪ್ರಶ್ನೆ ಸಂಬಂಧ ಪಡುವ ಭೌಗೋಳಿಕ ಪ್ರದೇಶ/ಸ್ಥಳ | ಸಮಸ್ಯೆ/ಬೇಡಿಕೆ/ಪ್ರಶ್ನೆ ಪರಿಹರಿಸಲು ತೆಗೆದುಕೊಳ್ಳಲಾದ ನಿರ್ಣಯ/ ಠರಾವು | ತೆಗೆದುಕೊಳ್ಳಲಾದ ನಿರ್ಣಯ/ ಠರಾವು ಜಾರಿಗೊಳಿಸಬೇಕಾದ ಜವಬ್ದಾರಿ (ಇಲಾಖೆ ಮತ್ತು ಅಧಿಕಾರಿ) | ಜಾರಿಗೊಳಿಸಲು ನಿಗದಿಪಡಿಸಲಾದ ಕಾಲಾವದಿ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 6 | 7 |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

***ಸೂಚನೆ:*** 1)ವಾರ್ಡ್ ಮಟ್ಟದ ಮಹಿಳಾ ಸಭೆಯಲ್ಲಿ ಮಹಿಳೆಯರಿಂದ ಮೂಡಿಬಂದ ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಕುರಿತು ಚರ್ಚಿಸಿ, ಆದ್ಯತೀಕರಿಸಿ ಗ್ರಾಮ ಪಂಚಾಯತಿ ಮಟ್ಟದ ಮಹಿಳಾ ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಲಾದ ವಿವರಗಳನ್ನು ಮೇಲಿನ ನಮೂನೆಯಲ್ಲಿ ದಾಖಲಿಸುವುದು.

2)ಮಹಿಳೆಯರಿಂದ ಮೂಡಿಬಂದ ಸಮಸ್ಯೆ/ಬೇಡಿಕೆ/ಪ್ರಶ್ನೆಗಳನ್ನು ಆದ್ಯತೆ ಮತ್ತು ನಿರ್ಣಯಗಳ ಅನುಸಾರ ಪರಿಹರಿಸಲು ಗ್ರಾಮ ಪಂಚಾಯಿತಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು ಹಾಗೂ ಸಂಬಂಧಿಸಿದ ಅನುಷ್ಠಾನ ಇಲಾಖೆಯ ಕ್ರಿಯಾ ಯೋಜನೆಗಳಲ್ಲಿ ಅಳವಡಿಸಿಕೊಳ್ಳುವುದು.

*ಕ್ಷೇತ್ರಗಳು -ಶಿಕ್ಷಣ, ಆರೋಗ್ಯ, ರಕ್ಷಣೆ, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ವಸತಿ, ಮಾನವ ಸಂಪನ್ಮೂಲ, ಇತ್ಯಾದಿ ನಮೂದಿಸುವುದು)

## ನಮೂನೆ-4

## ವಿವಿಧ ಯೋಜನೆಗಳಲ್ಲಿ ಕಿಶೋರಿಯರ/ ಮಹಿಳಾ ಫಲಾನುಭವಿಗಳು ದಾಖಲಾದ ಮತ್ತು ಗುರುತಿಸಿದ ಪಟ್ಟಿ

ಜಿಲ್ಲೆಯ : ತಾಲ್ಲೂಕು: ಗ್ರಾಮ ಪಂಚಾಯತಿ ಹೆಸರು:

| ಕ್ರಮ ಸಂಖ್ಯೆ | ವಿಷಯದ ಹೆಸರು | ಪ್ರಸ್ತುತ ದಾಖಲಾತಿ (ಸಂಖ್ಯೆ) | ಗ್ರಾಮ ಪಂಚಾಯಿತಿ ಡೆಸ್ಕ್ ಮುಖಾಂತರ ನೋಂದಣಿ ಗುರುತಿಸಿದ ಸಂಖ್ಯೆ. |
|---|---|---|---|
| 1 | 2 | 3 | 4 |
| 1. | ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ದಾಖಲಾದ ಮಹಿಳೆಯರ ಸಂಖ್ಯೆ | | |
| 2. | NRLM ಅಡಿಯ ಸ್ವ-ಸಹಾಯ ಸಂಘಗಳಲ್ಲಿ ನೋಂದಾಯಿಸಿದ ಮಹಿಳೆಯರ ಸಂಖ್ಯೆ | | |
| 3. | ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ (GPAA) | | |
| 4. | ಪ್ರಧಾನ ಮಂತ್ರಿ ಜೀವನಜ್ಯೋತಿ ಭೀಮಾ ಯೋಜನೆ (PMJBY) | | |
| 5. | ಸುಕನ್ಯಾ ಸಮೃದ್ಧಿ ಯೋಜನೆ (SSY) ಉಳಿತಾಯ ಯೋಜನೆ | | |
| 6. | ಪ್ರಧಾನ ಮಂತ್ರಿ ಜನಧನ್ ಯೋಜನಾ | | |

| | | | |
|---|---|---|---|
| 6 | ಪ್ರಧಾನ ಮಂತ್ರಿ ಮುದ್ರಾ ಯೋಜನೆ | | |
| 7 | ಇತರೆ | | |